# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:10-10-2025 ರಂದು ಶುಕ್ರವಾರ "Sahyadri Institute of Commerce, AIT Circle,K.M. Road, Jyothinagar. Chikkamagaluru" ಇಲ್ಲಿ ನಡೆದ "398ನೇ ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಆರ್. ಹಿರೇಮಣಿನಾಯ್ಕ, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 5. | ಡಾ. ಕೇಶವ, ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 6. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 7. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 8. | ಡಾ. ಕೆ.ಎಲ್. ಅರವಿಂದ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಮಧು ಜಿ. ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಉಲ್ಲಾಸ್ ಇ.ಜಿ. ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರ ಪ್ರಾಂಶುಪಾಲರು | ಸದಸ್ಯರು |
| 12. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 13. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 14. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 15. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 16. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 17. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರನ್ನು ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ಕರ್ನಾಟಕ ಸರ್ಕಾರದಿಂದ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡ ಪ್ರೊ.ಆರ್.ತಿಮ್ಮರಾಯಪ್ಪ ಹಾಗೂ ಡೀನರ ಜೇಷ್ಠತೆ ಮತ್ತು ಸರದಿಯ ಮೇಲೆ ಮಾನ್ಯ ಕುಲಪತಿಯವರಿಂದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಪ್ರೊ.ಆರ್.ಹಿರೇಮಣಿನಾಯ್ಕ ಇವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ದಕ್ಷಿಣ ಆಫ್ರಿಕಾದ Gaborone International Convention Center, Botswanaದಲ್ಲಿ ದಿನಾಂಕ:07-09-2025 ರಿಂದ 15-09-2025ರವರಗೆ ನಡೆದ Eleventh Pan-Commonwealth Forum on Open Learning ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾನ್ಯ ಕುಲಪತಿಯವರು ಭಾಗವಹಿಸಿದ್ದ ಸಂದರ್ಭದಲ್ಲಿ ಪ್ರಭಾರ ಕುಲಪತಿಯಾಗಿ ಕಾರ್ಯನಿರ್ವಹಿಸಿದ ಪ್ರೊ.ಜಗನ್ನಾಥ ಕೆ.ಡಾಂಗೆ ರವರನ್ನು ಮತ್ತು ವಿಶ್ವವಿದ್ಯಾಲಯದಲ್ಲಿ ದಿನಾಂಕ:14-09-2023 ರಿಂದ 04-09-2025 ರವರೆಗೆ ಕುಲಸಚಿವ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

(ಮೌಲ್ಯಮಾಪನ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಪ್ರೊ.ಎಸ್.ಎಂ.ಗೋಪಿನಾಥ ಹಾಗೂ ದಿನಾಂಕ:14-09-2023 ರಿಂದ 13-09-2025 ರವರೆಗೆ ಡೀನರ ಜೇಷ್ಠತೆ ಮೇಲೆ ಸಿಂಡಿಕೇಟ್ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿ, ಅವಧಿ ಮುಗಿದ ಹಿನ್ನೆಲೆಯಲ್ಲಿ ಸದಸ್ಯತ್ವದಿಂದ ಬಿಡುಗಡೆ ಹೊಂದಿದ ಶಿಕ್ಷಣ ನಿಕಾಯದ ಡೀನರಾದ ಪ್ರೊ. ಜಗನ್ನಾಥ ಕೆ. ಡಾಂಗೆ ರವರ ಸೇವೆಯನ್ನು ಸ್ಮರಿಸಿ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ. ಎಸ್.ಎಂ. ಗೋಪಿನಾಥ್‌ರವರು, ನನ್ನ ಎರಡು ವರ್ಷಗಳ ಸೇವಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಲು ಸಲಹೆ, ಸೂಚನೆ ಮತ್ತು ಸಹಕಾರ ನೀಡಿದ ಮಾನ್ಯ ಕುಲಪತಿಯವರು, ಕುಲಸಚಿವರು, ಸಿಂಡಿಕೇಟ್ ಸದಸ್ಯರು ಹಾಗೂ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳಿಗೆ ಸಂತೋಷದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಚಿಕ್ಕಮಗಳೂರಿನಲ್ಲಿ ಸಭೆಯನ್ನು ಅಚ್ಚುಕಟ್ಟಾಗಿ ಏರ್ಪಡಿಸಿದ ಕಾಲೇಜಿನ ಆಡಳಿತ ಮಂಡಳಿಯವರು, ಪ್ರಾಂಶುಪಾಲರು ಮತ್ತು ಸಿಬ್ಬಂದಿಯವರಿಗೆ ಕೃತಜ್ಞತೆ ಸಲ್ಲಿಸಿದರು. ಮುಂದುವರೆದು ಮಾತನಾಡಿದ ಅವರು, ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸಂಬಂಧಪಟ್ಟ ಬಹಳಷ್ಟು ವಿಷಯಗಳು ಚರ್ಚೆ ಮತ್ತು ನಿರ್ಣಯಕ್ಕೆ ಇವೆ. ಆದುದರಿಂದ ಉತ್ತಮ ಚರ್ಚೆ ನಡೆಸಿ ನಿರ್ಣಯ ಕೈಗೊಳ್ಳೋಣ ಎಂದರು. 24 ಬೋಧಕ ಹುದ್ದೆಗಳ ನೇಮಕಾತಿಗೆ ಸರ್ಕಾರವು ಅನುಮತಿ ನೀಡಿದ್ದು, ಸದರಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ರೋಸ್ಟರ್ ಬಿಂದು ನಿಗದಿಪಡಿಸಿ ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಪೂರ್ವಾನುಮತಿ ಪಡೆದು ನಿಯಮಾನುಸಾರ ನೇಮಕಾತಿ ಮಾಡಲಾಗುವುದೆಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು.

ನಂತರ ಕಾರ್ಯಸೂಚಿಯ ಪ್ರಕಾರ ವಿಷಯವನ್ನು ಚರ್ಚೆಗೆ ಕೈಗೆತ್ತಿಗೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2025-ಸಿಂ-6.01:** ದಿನಾಂಕ:12-08-2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:12-08-2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕುಲಸಚಿವರು ದೃಢೀಕರಣಕ್ಕಾಗಿ ಸಭೆಗೆ ಮಂಡಿಸಿದರು. ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಯ ನಡಾವಳಿಯ ಮೇಲೆ ಕೈಗೊಂಡ ಕ್ರಮದ ವರದಿ (Action Taken) ಇಲ್ಲದೆ ನಡಾವಳಿಗಳನ್ನು ದೃಢೀಕರಿಸಲು ಆಗುವುದಿಲ್ಲ ಎಂದರು. ಕುಲಸಚಿವರು ಮಾತನಾಡಿ, ಕೆಲವು ವಿಭಾಗಗಳಿಂದ ಕೈಗೊಂಡ ಕ್ರಮದ ವರದಿ (Action Taken) ಬಂದಿರುವುದಿಲ್ಲ. ಆದುದರಿಂದ ಮುಂದಿನ ಸಭೆಗೆ ಮಂಡಿಸಲಾಗುವುದು ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ ಕೈಗೊಂಡ ಕ್ರಮದ ವರದಿ (Action Taken) ಇಲ್ಲದಿರುವುದರಿಂದ ಹಿಂದಿನ ಸಭೆಯ ನಿರ್ಣಯಗಳ ಬಗ್ಗೆ ವಿಶ್ವವಿದ್ಯಾಲಯ ಏನು ಕ್ರಮ ಕೈಗೊಂಡಿದೆ ಎಂಬುದರ ಮಾಹಿತಿ ಸದಸ್ಯರಿಗೆ ದೊರೆಯುವುದಿಲ್ಲವಾದ್ದರಿಂದ ನಡಾವಳಿಗಳನ್ನು ದೃಢೀಕರಿಸುವ ವಿಷಯವನ್ನು ಮುಂದೂಡುವಂತೆ ಕೋರಿದರು. ಇದಕ್ಕೆ ಸದಸ್ಯರಾದ ಶ್ರೀ ಲಕ್ಷ್ಮಿಕಾಂತ ಚಿಮನೂರು, ಶ್ರೀಮತಿ ಸಾಕಮ್ಮ, ಶ್ರೀ ಶಿವಕುಮಾರ್ ಮತ್ತು ಡಾ.ಕೆ.ಎಲ್. ಅರವಿಂದರವರು ಕೂಡ ಧ್ವನಿಗೂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:12-08-2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಯಿತು.

**2025-ಸಿಂ-6.02:** ಸ್ನಾತಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ಚರ್ಚೆ:** ವಿಶ್ವವಿದ್ಯಾಲಯದ ಸ್ನಾತಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆಗಾಗಿ ಸದಸ್ಯರ ಪಟ್ಟಿಯನ್ನು ಅನುಮೋದನೆಗಾಗಿ ಕುಲಸಚಿವರು ಸಭೆಗೆ ಮಂಡಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಡಾ.ಜಿ. ಮಧುರವರು ಮಾತನಾಡಿ, ಸ್ನಾತಕ ವಿಷಯಗಳ ಬಗ್ಗೆ ಕಾಲೇಜುಗಳ ಅಧ್ಯಾಪಕರಿಗೆ ಪೂರ್ಣ ಮಾಹಿತಿ ಇರುತ್ತದೆ. ಆದುದರಿಂದ ಸ್ನಾತಕ ಅಧ್ಯಯನ ಮಂಡಳಿಗೆ ಸ್ನಾತಕ ಅಧ್ಯಾಪಕರನ್ನು ಮಾತ್ರ ಪರಿಗಣಿಸಬೇಕು. ಇದರಲ್ಲಿ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರ ಅವಶ್ಯಕತೆ ಇರುವುದಿಲ್ಲ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸ್ನಾತಕ ಅಧ್ಯಾಪಕರು ಅವರ ವಿಷಯದಲ್ಲಿ ಪರಿಣಿತರಾಗಿರುತ್ತಾರೆ. ಆದುದರಿಂದ ಸ್ನಾತಕ ಅಧ್ಯಯನ ಮಂಡಳಿಗಳಿಗೆ ಸ್ನಾತಕ (ಯು.ಜಿ) ಅಧ್ಯಾಪಕರನ್ನು ಮಾತ್ರ ಪರಿಗಣಿಸಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಮಂಡಿಸಿರುವ ಪಟ್ಟಿಯನ್ನು ಯಾವ ಆಧಾರದಲ್ಲಿ ಸಿದ್ಧಪಡಿಸಿದ್ದಾರೆ ಎಂಬುದನ್ನು ಪರಿಶೀಲಿಸಬೇಕು. ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಸ್ನಾತಕೋತ್ತರ ಅಧ್ಯಾಪಕರು ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯಲ್ಲಿ ಸ್ನಾತಕ ವಿಷಯಗಳ ಅದ್ಯಾಪಕರು ಇರುವುದು ಒಳ್ಳೆಯದು. ಸ್ನಾತಕ ಅಧ್ಯಯನ ಮಂಡಳಿಗೆ ಅಧ್ಯಕ್ಷರು ಕೂಡ ಯು.ಜಿ.ಯವರೇ ಇರಬಹುದು ಎಂದರು. ಪ್ರೊ.ಆರ್.ಹಿರೇಮಣಿನಾಯ್ಕರವರು ಮಾತನಾಡಿ, ನಿಯಮಗಳ ಪ್ರಕಾರ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರೇ ಸ್ನಾತಕ ಅಧ್ಯಯನ ಮಂಡಳಿಗೆ ಕೂಡ ಅಧ್ಯಕ್ಷರಾಗಿರಬೇಕಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ, ಪ್ರಸ್ತುತ ಸಲ್ಲಿಸಿರುವ ಸ್ನಾತಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪಟ್ಟಿಯಲ್ಲಿ 06 ಜನ ಸ್ನಾತಕ ಅಧ್ಯಾಪಕರು ಕೂಡ ಇರುವುದರಿಂದ ಅವರನ್ನು ಪರಿಗಣಿಸಿ ಅಧ್ಯಯನ ಮಂಡಳಿಯನ್ನು ರಚಿಸಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ಸ್ನಾತಕ ವಿಷಯಗಳ ಅಧ್ಯಾಪಕರು ಸದಸ್ಯರಾಗಿರುವ ಮತ್ತು ನಿಯಮಗಳ ಪ್ರಕಾರ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರೇ ಸ್ನಾತಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಗೆ ಕೂಡ ಅಧ್ಯಕ್ಷರಾಗಿರುವಂತೆ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಮುಂದುವರೆದು, ಇನ್ನು ಮುಂದೆ ಸ್ನಾತಕ ಅಧ್ಯಯನ ಮಂಡಳಿಗಳನ್ನು ರಚಿಸುವಾಗ ಸ್ನಾತಕ ಅಧ್ಯಯನ ವಿಷಯಗಳ ಅಧ್ಯಾಪಕರನ್ನು ಮಾತ್ರ ಸದಸ್ಯರಾಗಿ ನೇಮಕ ಮಾಡಬೇಕು ಎಂದು ನಿರ್ಣಯಿಸಲಾಯಿತು.

**2025–ಸಿಂ–6.03:** ಸ್ನಾತಕ ಕನ್ನಡ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಕನ್ನಡ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025–ಸಿಂ–6.04:** ಸ್ನಾತಕ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಸ್ನಾತಕ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆಗಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಪರಿಶೀಲಿಸಿದ ಸಭೆಯು, ಪಟ್ಟಿಯಲ್ಲಿ ಕೇವಲ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು ಮತ್ತು ಅನ್ಯ ವಿಶ್ವವಿದ್ಯಾಲಯಗಳ ಅಧ್ಯಾಪಕರು ಮಾತ್ರ ಇರುವುದರಿಂದ ವಿಶ್ವವಿದ್ಯಾಲಯದ ವ್ಯಾಪ್ತಿಯ ಸ್ನಾತಕ ಅಧ್ಯಾಪಕರನ್ನು ಕೂಡ ಸೇರ್ಪಡೆಗೊಳಿಸಿ ಸ್ನಾತಕ ಅಧ್ಯಾಪಕರ ಪರಿಷ್ಕೃತ ಪಟ್ಟಿಯನ್ನು ಪಡೆದುಕೊಂಡು ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025–ಸಿಂ–6.05:** ಸ್ನಾತಕ ಬಿ.ಬಿ.ಎ. ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಸ್ನಾತಕ ಬಿ.ಬಿ.ಎ. ಅಧ್ಯಯನ ಮಂಡಳಿಯ ಪುನರ್‌ರಚನೆಗಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಪರಿಶೀಲಿಸಿದ ಸಭೆಯು, ಪಟ್ಟಿಯಲ್ಲಿ ಕೇವಲ ಸ್ನಾತಕೋತ್ತರ ವಿಭಾಗಗಳ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಅಧ್ಯಾಪಕರು ಮಾತ್ರ ಇರುವುದರಿಂದ, ವಿಷಯ ಸಂಖ್ಯೆ:2025-ಸಿಂ-6.02ರಲ್ಲಿ ಚರ್ಚಿಸಿ ನಿರ್ಣಯಿಸಿರುವಂತೆ ಸ್ನಾತಕ ಅಧ್ಯಾಪಕರ ಪರಿಷ್ಕೃತ ಪಟ್ಟಿಯನ್ನು ಪಡೆದುಕೊಂಡು ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025-ಸಿಂ-6.06:** ಸ್ನಾತಕೋತ್ತರ ಮನ:ಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಮನ:ಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025-ಸಿಂ-6.07:** ಸ್ನಾತಕ/ಸ್ನಾತಕೋತ್ತರ ಟೂರಿಸಂ & ಟ್ರಾವೆಲ್ಸ್ ಮತ್ತು ಹಾಸ್ಪಿಟಾಲಿಟಿ ಅಂಡ್ ಇವೆಂಟ್ ಮ್ಯಾನೇಜ್‌ಮೆಂಟ್ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ/ಸ್ನಾತಕೋತ್ತರ ಟೂರಿಸಂ & ಟ್ರಾವೆಲ್ಸ್ ಮತ್ತು ಹಾಸ್ಪಿಟಾಲಿಟಿ ಅಂಡ್ ಇವೆಂಟ್ ಮ್ಯಾನೇಜ್‌ಮೆಂಟ್ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025-ಸಿಂ-6.08:** ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ (ಎಂ.ಬಿ.ಎ.) ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025-ಸಿಂ-6.09:** ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025-ಸಿಂ-6.10:** ಸ್ನಾತಕೋತ್ತರ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025-ಸಿಂ-6.11:** ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2025–ಸಿಂ–6.11(ಎ):** 2024–25ನೇ ಸಾಲಿನ ವಾರ್ಷಿಕ ವರದಿ ಅನುಮೋದನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪ್ರಕರಣ 50ರನ್ವಯ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಲಾದ ವಿಶ್ವವಿದ್ಯಾಲಯದ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

## ಶೈಕ್ಷಣಿಕ ವಿಭಾಗ

**2025–ಸಿಂ–6.12:** ಶ್ರೀ ಸೋಮಶೇಖರ್ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ಅಧ್ಯಯನ)

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ. ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಲುವಾಗಿ ರೂ.25,000/–ಗಳ ದತ್ತಿನಿಧಿಯನ್ನು ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

**2025–ಸಿಂ–6.13:** ಶ್ರೀ ಸೋಮಶೇಖರ್ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ವಿಭಾಗ)

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ. ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ (ಎಂ.ಬಿ.ಎ.) ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಂಬಂಧ ರೂ.25,000/–ಗಳ ದತ್ತಿನಿಧಿ ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

**2025–ಸಿಂ–6.14:** ಶ್ರೀ ಸೋಮಶೇಖರ್ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ)

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ. ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಷಯದಲ್ಲಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಲುವಾಗಿ ರೂ.25,000/-ಗಳ ದತ್ತಿನಿಧಿ ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

**2025-ಸಿಂ-6.15:** ಶ್ರೀ ಸೋಮಶೇಖರ್ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ನಿವೃತ್ತ ಹಿರಿಯ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಕನ್ನಡ ಅಧ್ಯಯನ)

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ. ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025-26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಂಬಂಧ ರೂ.25,000/-ಗಳ ದತ್ತಿನಿಧಿ ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

## ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ

**2025-ಸಿಂ-6.16:** ಡಾ.ಕೆ.ಟಿ. ಸಂತೋಷ್ ಕುಮಾರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಇವರು ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಕುರಿತು.

**ನಿರ್ಣಯ:** ಡಾ.ಕೆ.ಟಿ.ಸಂತೋಷ್ ಕುಮಾರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಇವರು ದಿನಾಂಕ:13-10-2025 ರಿಂದ 14-10-2025ರವರೆಗೆ ಮಕಾವ್ ಮಿಲೆನಿಯಮ್ ಕಾಲೇಜು, ಮಕಾವ್ ವಿಶ್ವವಿದ್ಯಾಲಯ, ಮಕಾವ್ ಚೀನಾ ಇಲ್ಲಿ ನಡೆಯುವ 6th International Conference on Science and Technology Metrics (STMet-2025) ಸಮ್ಮೇಳನದಲ್ಲಿ ಭಾಗವಹಿಸಿ ಲೇಖನ ಮಂಡಿಸಲು ಅನುಮತಿಸಿದ ಸಭೆಯು, ಅವರಿಗೆ ಪ್ರಯಾಣ/ದಿನಭತ್ಯೆಯ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಠ $200, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯನ್ನು ಆಧರಿಸಿ ಪಾವತಿಸಲು ಸಭೆಯು ನಿರ್ಣಯಿಸಿತು.

**2025-ಸಿಂ-6.16(ಎ):** ಶ್ರೀ ಕಾರ್ತಿಕ್ ಎನ್.ಜೆ., ಸಂಶೋಧನಾ ವಿದ್ಯಾರ್ಥಿ ಇವರು ICUN World Congress 2025 ರಲ್ಲಿ ಭಾಗವಹಿಸಲು ಅನುಮತಿ ನೀಡಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ನಿರ್ವಹಣೆ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪಿಹೆಚ್.ಡಿ. ಸಂಶೋಧನಾರ್ಥಿಯಾಗಿರುವ ಶ್ರೀ ಕಾರ್ತಿಕ್ ಎನ್.ಜೆ. ಇವರು ದಿನಾಂಕ:09-10-2025 ರಿಂದ 15-10-2025 ರವರೆಗೆ Abu Dhabi, UAE ದಲ್ಲಿ ನಡೆಯುವ ICUN World Congress 2025ಕ್ಕೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ, ಸದರಿ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿಸಿದ ಸಭೆಯು, ಅವರಿಗೆ ಎಕಾನಮಿ ದರ್ಜೆಯ ವಿಮಾನಯಾನ ಪ್ರಯಾಣ ಭತ್ಯೆ/ದಿನಭತ್ಯೆಯಲ್ಲಿ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕದ ಶೇ.50ರಷ್ಟು ಅಥವಾ ಗರಿಷ್ಠ $200, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಆಯ-ವ್ಯಯದ ವಿದ್ಯಾರ್ಥಿ ಬೆಂಬಲ ಸೇವೆಗಳು ಶೀರ್ಷಿಕೆಯಡಿಯಲ್ಲಿ ಭರಿಸಿ ಹಣಕಾಸಿನ ಲಭ್ಯತೆ ಆಧರಿಸಿ ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2025–ಸಿಂ–6.16(ಬಿ):** ಸಂಶೋಧನಾರ್ಥಿಗಳು ಸಮ್ಮೇಳನಕ್ಕಾಗಿ Glasgow, Scotland, UK ಗೆ ತೆರಳಲು ಅನುಮತಿ ನೀಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪಿಹೆಚ್.ಡಿ. ಸಂಶೋಧನೆ ನಡೆಸುತ್ತಿರುವ ಕು:ಮೇಘ ಜಿ. ಮತ್ತು ಪೋಸ್ಟ್ ಡಾಕ್ಟರಲ್ ಸಂಶೋಧನಾರ್ಥಿಯಾಗಿರುವ(PDF) ಡಾ.ಮೇಘನಾ ಪಿ. ಇವರುಗಳು Glasgow, Scotland, UKದಲ್ಲಿ ದಿನಾಂಕ:12-10-2025 ರಿಂದ 18-10-2025ರವರೆಗೆ ನಡೆಯಲಿರುವ 4th Elsevier Food Chemistry Conferenceನಲ್ಲಿ ಸಂಶೋಧನಾ ಪ್ರಬಂಧ ಮಂಡಿಸಲು ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಹಾಗೂ ಅವರ ಇಚ್ಛೆಯಂತೆ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಿಲ್ಲದಂತೆ ತಮ್ಮ ಸ್ವಂತ ಖರ್ಚಿನಲ್ಲಿ ಹೋಗಿ ಬರಲು ಅನುಮತಿ ನೀಡಲು ಸಭೆಯು ನಿರ್ಣಯಿಸಿತು.

## ಹಣಕಾಸು ವಿಭಾಗ

**2025–ಸಿಂ–6.17:** 2025-26ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್.ರಮೇಶ್‌ರವರು ದಿನಾಂಕ:16-09-2025 ರಂದು ನಡೆದ 2025-26ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದರು. ಶ್ರೀ ಶಶಿಧರ ಬಿ.ಎನ್. ರವರು ಮಾತನಾಡಿ ವಿಷಯ ಸಂಖ್ಯೆ:2025-ಹಸ:1:3 ಗೆ ಸಂಬಂಧಪಟ್ಟಂತೆ ಏಪ್ರಿಲ್-2025 ರಿಂದ ಜೂನ್-2025 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ವಿವರವನ್ನು ಪರಿಶೀಲನೆಗಾಗಿ ಒದಗಿಸಬೇಕಾಗಿತ್ತು ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ, ಎಲ್ಲಾ ವಿವರಗಳನ್ನು ಹಣಕಾಸು ಸಮಿತಿ ಸಭೆಗೆ ಮಂಡಿಸಿದ್ದು, ಸಭೆಯಲ್ಲಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ಹಣಕಾಸು ಇಲಾಖೆ, ಯೋಜನಾ ಇಲಾಖೆಯ ಅಧಿಕಾರಿಗಳು ಹಾಗೂ ಒಬ್ಬರು ಸಿಂಡಿಕೇಟ್ ಸದಸ್ಯರು ಕೂಡ ಉಪಸ್ಥಿತರಿದ್ದರು. ಆದುದರಿಂದ, ಸಭೆಯ ನಡಾವಳಿಗಳನ್ನು ಮಾತ್ರ ಸಿಂಡಿಕೇಟ್ ಅನುಮೋದನೆಗೆ ಮಂಡಿಸಿದೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ ಸಿಂಡಿಕೇಟ್ ಉನ್ನತ ಗೌರ್ನಿಂಗ್ ಬಾಡಿಯಾಗಿದ್ದು, ಹಣಕಾಸಿನ ವಿವರಗಳನ್ನು ಸಭೆಗೆ ಮಂಡಿಸುವುದು ಅಗತ್ಯ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ನಾನು ಹಣಕಾಸು ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದು, ಸ್ವೀಕೃತಿ ಮತ್ತು ವೆಚ್ಚಗಳ ವಿವರವನ್ನು ಹಣಕಾಸು ಸಮಿತಿ ಸಭೆಗೆ ಮಂಡಿಸಿರಲಿಲ್ಲ. ಅದನ್ನು ಒದಗಿಸುವಂತೆ ಸಭೆಯಲ್ಲಿ ಕೇಳಲಾಗಿತ್ತು, ವಿವರವನ್ನು ಸಿಂಡಿಕೇಟ್ ಸಭೆಗೆ ಮಂಡಿಸುವುದಾಗಿ ಹಣಕಾಸು ಅಧಿಕಾರಿಗಳು ತಿಳಿಸಿದ್ದರು ಎಂದರು. ಹಣಕಾಸು ಅಧಿಕಾರಿಗಳು ಮಾಹಿತಿ ನೀಡಿ ಮಾತನಾಡುತ್ತಾ, ವಿವರವಾದ ಅಜೆಂಡಾವನ್ನು ಎಲ್ಲಾ ಸದಸ್ಯರಿಗೆ ಸಾಕಷ್ಟು ಮುಂಚಿತವಾಗಿಯೇ ಒದಗಿಸಲಾಗಿತ್ತು ಎಂದರು. ಸಿಂಡಿಕೇಟ್ ಸಭೆಗೆ ಹಣಕಾಸಿನ ಎಲ್ಲಾ ವಿವರಗಳನ್ನು ಒದಗಿಸಬೇಕೆಂದು ಎಲ್ಲಾ ಸದಸ್ಯರು ಕೇಳಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, 2025-26ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಎಲ್ಲಾ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

## ದಾಸ್ತಾನು ಮತ್ತು ಖರೀದಿ ವಿಭಾಗ

**2025–ಸಿಂ–6.18:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧದ ಇ-ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಂಡಿರುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿತ್ತು. ಮೊದಲ ಬಾರಿಗೆ ಯಾವುದೇ ಟೆಂಡರ್‌ದಾರರು ಭಾಗವಹಿಸದ ಕಾರಣ ಮರು ಟೆಂಡರ್ ಕರೆದಿದ್ದು, ಇದರಲ್ಲಿ ಮೂವರು ಸರಬರಾಜುದಾರರು ಭಾಗವಹಿಸಿದ್ದರು. ಇದರಲ್ಲಿ ಒಂದು ಸಂಸ್ಥೆಯು EMD ಹಾಗೂ NSIC ಇವೆರಡರಲ್ಲಿ ಒಂದೂ ಷರತ್ತನ್ನೂ ಪೂರೈಸದಿರುವುದರಿಂದ ಮೊದಲ ಹಂತದಲ್ಲಿಯೇ ತಿರಸ್ಕೃತಗೊಂಡಿತ್ತು. ಉಳಿದ ಎರಡು ಸಂಸ್ಥೆಗಳಲ್ಲಿ ಶ್ರೀ ದುರ್ಗಾ ಕಾರ್ಡ್ಸ್ ಅಂಡ್ ಸ್ಟೇಷನರಿ, ಶಿವಮೊಗ್ಗ ಇವರು ತಾಂತ್ರಿಕ ಬಿಡ್‌ನಲ್ಲಿ ತಿರಸ್ಕೃತಗೊಂಡಿದ್ದು, ಎಲ್ಲಾ ಷರತ್ತುಗಳನ್ನು ಪೂರೈಸಿದ್ದ, ಮೆ. ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್‌ಪ್ರೈಸಸ್, ಭದ್ರಾವತಿ ಇವರು ಅರ್ಹತೆ ಪಡೆದಿದ್ದರು. ದಿನನಿತ್ಯದ ಆಡಳಿತದ ಸುಗಮ ನಿರ್ವಹಣೆ ದೃಷ್ಟಿಯಿಂದ ಲೇಖನ ಸಾಮಗ್ರಿ/ಮುದ್ರಣ ಸಾಮಗ್ರಿಗಳು ತುರ್ತು ಅಗತ್ಯವಿದ್ದುದ್ದರಿಂದ ಹಾಗೂ ಇದು ಮರು ಟೆಂಡರ್ ಆಗಿದ್ದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ576ವೆಚ್ಚ–12 2018, ದಿನಾಂಕ:22–05–2018ರಲ್ಲಿ ಏಕ ಬಿಡ್ ಟೆಂಡರ್‌ನ್ನು ಪರಿಗಣಿಸಲೇಬೇಕಾದ ಅಸಾಧಾರಣ ಸಂದರ್ಭಗಳಲ್ಲಿ ಅವಕಾಶವಿರುವುದರಿಂದ, ಒಬ್ಬರು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಟೆಂಡರ್ ಪರಿಶೀಲನಾ ಸಮಿತಿಯು ಟೆಂಡರ್‌ನ್ನು ಅಂಗೀಕರಿಸಲು ಒಪ್ಪಿ, ಸರಬರಾಜುದಾರರೊಂದಿಗೆ ದರಸಂಧಾನ ನಡೆಸಿದ್ದು, ಟೆಂಡರ್‌ನಲ್ಲಿ ನಮೂದಿಸಿದ್ದ ದರದಲ್ಲಿ ಶೇ.1ರಷ್ಟು ರಿಯಾಯಿತಿ ನೀಡಲು ಲಿಖಿತವಾಗಿ ಒಪ್ಪಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಛೇರಿಗಳಿಗೆ ಲೇಖನ ಸಾಮಗ್ರಿ ಮತ್ತು ಮುದ್ರಣ ಸಾಮಗ್ರಿಗಳ ತುರ್ತು ಅಗತ್ಯವಿದ್ದುದ್ದರಿಂದ, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಟೆಂಡರ್ ಅಂಗೀಕರಿಸಿ ಆದೇಶ ಹೊರಡಿಸಿರುವುದನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಶ್ರೀಮತಿ ಸಾಕಮ್ಮರವರು ಮಾತನಾಡಿ, ಟೆಂಡರ್‌ನ ಮೊತ್ತವನ್ನು ಟಿಪ್ಪಣಿಯಲ್ಲಿ ನಮೂದಿಸಿಲ್ಲ ಮತ್ತು ಐಟಂವಾರು ದರಗಳ ವಿವರಗಳನ್ನು ಕೂಡ ಒದಗಿಸಿಲ್ಲ ಎಂದರು. ಶ್ರೀ ಶಶಿಧರ ಬಿ.ಎನ್.ರವರು ಮಾತನಾಡಿ, ಸಿಂಗಲ್ ಬಿಡ್‌ನ್ನು ಏಕೆ ಅನುಮೋದಿಸಲಾಯಿತು ಎಂದರು. ಕುಲಸಚಿವರು ಮಾತನಾಡಿ, ಟೆಂಡರ್ ಒಟ್ಟು ಮೊತ್ತ ರೂ.40.00ಲಕ್ಷಗಳಾಗಿದ್ದು, ಅಷ್ಟೂ ಮೊತ್ತದ ಸಾಮಗ್ರಿಗಳನ್ನು ಒಮ್ಮೆಗೇ ಖರೀದಿಸುವುದಿಲ್ಲ. ಎರಡು ವರ್ಷಗಳ ಕಾಲ ಅಗತ್ಯಕ್ಕೆ ಅನುಗುಣವಾಗಿ ಆಗಾಗ್ಗೆ ಖರೀದಿಸಲಾಗುವುದು. ಇದು ಸಿಂಗಲ್ ಬಿಡ್ ಆಗಿದ್ದಾಗ್ಯೂ ಮೊದಲ ಬಾರಿಗೆ ಯಾವುದೇ ಸರಬರಾಜುದಾರರು ಭಾಗವಹಿಸದ ಕಾರಣ ಮರು ಟೆಂಡರ್ ನಡೆಸಲಾಗಿದ್ದು, ದಿನಾಂಕ:22–05–2018ರ ಸರ್ಕಾರದ ಸುತ್ತೋಲೆ ಪ್ರಕಾರ ಅಂಗೀಕರಿಸಲಾಗಿದೆ ಎಂದರು. ಶ್ರೀ ಶಿವಕುಮಾರ್ ಹಾಗೂ ಶ್ರೀ ಶಾಂತಕುಮಾರ್‌ರವರು ಮಾತನಾಡಿ, ಹೆಚ್ಚಿನ ಸರಬರಾಜುದಾರರು ಟೆಂಡರ್‌ನಲ್ಲಿ ಭಾಗವಹಿಸದಿದ್ದಲ್ಲಿ ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾದ M.S.I.L ನಿಂದ ಲೇಖನ ಸಾಮಗ್ರಿಗಳನ್ನು ಖರೀದಿಸಬಹುದಾಗಿತ್ತು. ಅಲ್ಲದೇ, ಟಿಪ್ಪಣಿಯೊಂದಿಗೆ ದರ ಅಂಗೀಕರಿಸಿದ ಮತ್ತು ದರಸಂಧಾನದ ನಂತರ ನಿಗದಿಪಡಿಸಿದ ದರಗಳ ವಿವರಗಳನ್ನು ಕೂಡ ಒದಗಿಸಿಲ್ಲ. ಆದುದರಿಂದ ಇದಕ್ಕೆ ನನ್ನ ವಿರೋಧವಿದೆ ಎಂದರು. ಕುಲಸಚಿವರು ಮಾತನಾಡಿ, M.S.I.Lನಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಎಲ್ಲಾ ಮುದ್ರಣ ಮತ್ತು ಲೇಖನ ಸಾಮಗ್ರಿಗಳು ದೊರೆಯುವುದಿಲ್ಲ. ಅಲ್ಲದೇ ಅವರ ದರಗಳು ಮಾರುಕಟ್ಟೆ ದರಗಳಿಗಿಂತ ಅಧಿಕವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಸಿಂಗಲ್ ಟೆಂಡರ್‌ನ್ನು ಅಂಗೀಕರಿಸಿದೆ. ಶ್ರೀ ಶಿವಕುಮಾರ್‌ರವರಿಗೆ ಸಮ್ಮತಿ ಇಲ್ಲವಾದಲ್ಲಿ ಅವರು ಲಿಖಿತವಾಗಿ ನೀಡಬಹುದು ಎಂದರು. ಸಭೆ ಮುಕ್ತಾಯದೊಳಗೆ ಶ್ರೀ ಶಿವಕುಮಾರ್‌ರವರು ಅಸಮ್ಮತಿ ಪತ್ರವನ್ನು ನೀಡಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದ, ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಎರಡು ವರ್ಷಗಳ ಕಾಲ ಸರಬರಾಜು ಮಾಡಲು ಇ-ಟೆಂಡರ್ ಪ್ರಕ್ರಿಯೆ ಮೂಲಕ ಆಯ್ಕೆಯಾದ ಸರಬರಾಜು ಸಂಸ್ಥೆಯೊಂದಿಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಕರಾರು ಒಪ್ಪಂದ ಮಾಡಿಕೊಂಡು ಆದೇಶ ನೀಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು ಹಾಗೂ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಶಿವಕುಮಾರ್‌ರವರು ನೀಡಿದ ಅಸಮ್ಮತಿ ಪತ್ರವನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮಕೈಗೊಳ್ಳಲು ನಿರ್ಣಯಿಸಿತು.

**2025–ಸಿಂ–6.19:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಾಲೇಜುಗಳಿಗೆ ಅಗತ್ಯವಿರುವ ಕೆಮಿಕಲ್ಸ್/ಗ್ಲಾಸ್‌ವೇರ್ ಹಾಗೂ ಲಘು ಉಪಕರಣಗಳನ್ನು ಖರೀದಿ ಸಂಬಂಧದ ಇ-ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಂಡಿರುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಜ್ಞಾನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ಕಡೂರು ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಯೋಗಾಲಯಗಳಿಗೆ ಅಗತ್ಯವಿರುವ ಗ್ಲಾಸ್‌ವೇರ್/ಕೆಮಿಕಲ್ಸ್/ಲಘು ಉಪಕರಣಗಳನ್ನು ಸರಬರಾಜು ಮಾಡುವ ಸಂಬಂಧ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್‌ನಲ್ಲಿ ಮೂರು ಸಂಸ್ಥೆಗಳು ಭಾಗವಹಿಸಿದ್ದು, ಮೂರೂ ಸಂಸ್ಥೆಗಳು ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಪಡೆದುಕೊಂಡಿದ್ದವು. ಫೈನಾನ್ಸಿಯಲ್ ಬಿಡ್‌ನಲ್ಲಿ ಮೂರೂ ಸಂಸ್ಥೆಗಳು ರಿಯಾಯಿತಿ ನಮೂದಿಸಿದ್ದು, ಕಂಪನಿವಾರು ಹೆಚ್ಚಿನ ರಿಯಾಯಿತಿ ನಮೂದಿಸಿರುವ ಸಂಸ್ಥೆಗಳನ್ನು ಪರಿಗಣಿಸಿದ್ದು, ಒಂದೇ ಸಾಮಗ್ರಿಗೆ ಎರಡು ಕಂಪನಿಗಳು ಸಮ ದರಪಟ್ಟಿ ನಮೂದಿಸಿದ್ದ ಪ್ರಕರಣಗಳಲ್ಲಿ ಎರಡೂ ಸಂಸ್ಥೆಗಳನ್ನು ಪರಿಗಣಿಸಲು ಟೆಂಡರ್ ಪರಿಶೀಲನಾ ಸಮಿತಿಯು ನಿರ್ಣಯಿಸಿದೆ. ಸ್ನಾತಕೋತ್ತರ ವಿಭಾಗಗಳ ಪ್ರಾಯೋಗಿಕ ತರಗತಿಗಳಿಗೆ ಗ್ಲಾಸ್‌ವೇರ್/ಕೆಮಿಕಲ್ಸ್/ಲಘು ಉಪಕರಣಗಳು ತುರ್ತು ಅಗತ್ಯವಿದ್ದುದ್ದರಿಂದ ಮಾನ್ಯ ಕುಲಪತಿಗಳ ಅನುಮತಿ ಪಡೆದು ಸರಬರಾಜು ಆದೇಶವನ್ನು ಹೊರಡಿಸಿದ್ದು, ಇದನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಜ್ಞಾನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ಕಡೂರು ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಯೋಗಾಲಯಗಳಿಗೆ ಅಗತ್ಯವಿರುವ ಗ್ಲಾಸ್‌ವೇರ್/ಕೆಮಿಕಲ್ಸ್/ಲಘು ಉಪಕರಣಗಳನ್ನು ಸರಬರಾಜು ಮಾಡುವ ಸಲುವಾಗಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ಆಯ್ಕೆಯಾದ ಸರಬರಾಜು ಸಂಸ್ಥೆಗಳಿಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಕರಾರು ಒಪ್ಪಂದ ಮಾಡಿಕೊಂಡು ಆದೇಶ ನೀಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2025–ಸಿಂ–6.21:** ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಉಪಕುಲಸಚಿವ ಹುದ್ದೆಗಳನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳ ಪ್ರಕಾರ (Notification of UOM No:FP5/532/1991 dated:07-05-2012, being adopted by this University) ಭರ್ತಿ ಮಾಡಿಕೊಳ್ಳುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪ್ರಕರಣ 57ರ ಪ್ರಕಾರ ನೇಮಕಾತಿ ಸಮಿತಿ ರಚಿಸಿ ಅಧಿಸೂಚಿಸಲಾಗಿತ್ತು. ಅಧಿಸೂಚನೆಯನ್ವಯ ಅರ್ಜಿ ಆಹ್ವಾನಿಸಿ, ಅರ್ಹ ಸಹಾಯಕ ವೃಂದದ ಅಧಿಕಾರಿಗಳಿಗೆ ದಿನಾಂಕ:26–09–2025ರಂದು ಸಂದರ್ಶನ ನಡೆಸಿ, ಕುವೆಂಪು ವಿಶ್ವವಿದ್ಯಾಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮ 2012 ರನ್ವಯ ವಿಶ್ವವಿದ್ಯಾಲಯಕ್ಕೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಮಂಜೂರಾಗಿರುವ 10 ಹುದ್ದೆಗಳ ಪೈಕಿ ಶೇ 75% ಹುದ್ದೆಗಳಿಗೆ, ಅಂದರೆ 08 ಹುದ್ದೆಗಳಿಗೆ ಸಂದರ್ಶನದಲ್ಲಿನ ಕ್ಷಮತೆ ಹಾಗೂ ವಿದ್ಯಾರ್ಹತೆ/ಇತರೆ ಅರ್ಹತೆಗಳ ಆಧಾರದ ಮೇಲೆ ಮೆರಿಟ್/ ರೋಸ್ಟರ್ ನಿಯಮಾನುಸಾರ ಈ ಕೆಳಕಂಡ ಸಹಾಯಕ ಕುಲಸಚಿವರುಗಳನ್ನು ಉಪಕುಲಸಚಿವ ಹುದ್ದೆಯ ಬಡ್ತಿಗೆ ಪರಿಗಣಿಸಲು ಸಮಿತಿಯು ನಿರ್ಣಯಿಸಿರುತ್ತದೆ.

1. ಆಯ್ಕೆ ಪಟ್ಟಿ:

| ಕ್ರ ಸಂ. | ಹೆಸರು | ಮೀಸಲಾತಿ ವರ್ಗ (ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022 ದಿನಾಂಕ:28-12-2022) |
|---|---|---|
| 1 | ಡಾ.ಪಾಲಾಕ್ಷ ನಾಯ್ಕ್ ಎನ್.ಜೆ | SC |
| 2 | ಶ್ರೀಮತಿ ನವರತ್ನ ಟಿ | ST |
| 3 | ಶ್ರೀ ಚಂದ್ರಕಾಂತ ಎಂ | GM |
| 4 | ಶ್ರೀಮತಿ ಸುಮನ್ ಎ ಆಚಾರ್ | GM |
| 5 | ಶ್ರೀಮತಿ ಸುಜಾತ ಜಿ ಎನ್ | GM |
| 6 | ಶ್ರೀಮತಿ ಅರ್ಚನಕುಮಾರಿ | GM |
| 7 | ಶ್ರೀಮತಿ ಅಂಬುಜ ಎಸ್ | SC |
| 8 | ಶ್ರೀ ಸಿದ್ಧಲಿಂಗ ಜಿ ಪಾಟೀಲ್ | GM |

2. ಕಾಯ್ದಿರಿಸಿದ ಪಟ್ಟಿ:

1. ಶ್ರೀಮತಿ ಸುಶೀಲ ಕೆ.
2. ಶ್ರೀ ಕೃಷ್ಣಮೂರ್ತಿ ಜಿ.ಎಸ್.
3. ಶ್ರೀ ನಾಗರಾಜ ಟಿ.

ಶ್ರೀಮತಿ ಅರ್ಚನಾ ಕುಮಾರಿ (ದಿ:30-09-2025), ಶ್ರೀಮತಿ ನವರತ್ನ ಟಿ. (ದಿ:30-04-2026) ಮತ್ತು ಶ್ರೀ ಚಂದ್ರಕಾಂತ ಎಂ. (ದಿ:31-05-2026) ಇವರುಗಳ ವಯೋ ನಿವೃತ್ತಿಯಿಂದಾಗಿ ತೆರವಾಗುವ ಸ್ಥಾನಗಳಿಗೆ ಕ್ರಮವಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಸಹಾಯಕ ಕುಲಸಚಿವರುಗಳಿಗೆ ಜೇಷ್ಠತೆ ಆಧಾರದ ಮೇಲೆ ಉಪಕುಲಸಚಿವ ಹುದ್ದೆಯ ಬಡ್ತಿಗೆ ಪರಿಗಣಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ನೇಮಕಾತಿ ಸಮಿತಿ ಸಭೆಯ ನಿರ್ಣಯ ಹಾಗೂ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಮೇರೆಗೆ, ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, 08 ಅಧಿಕಾರಿಗಳಿಗೆ ಸಹಾಯಕ ಕುಲಸಚಿವ ಹುದ್ದೆಯಿಂದ ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡಿ ಆದೇಶ ಹೊರಡಿಸಲಾದ ವಿಶ್ವವಿದ್ಯಾಲಯದ ಕ್ರಮವನ್ನು ಸ್ಥಿರೀಕರಣಕ್ಕಾಗಿ ಹಾಗೂ ವಯೋ ನಿವೃತ್ತಿಯಿಂದ ತೆರವಾಗುವ ಉಪಕುಲಸಚಿವ ಹುದ್ದೆಯ ಸ್ಥಾನಗಳಿಗೆ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಸಹಾಯಕ ಕುಲಸಚಿವರುಗಳಿಗೆ ಬಡ್ತಿ ನೀಡಲು ಅನುಮೋದನೆಗಾಗಿ ಸಭೆಗೆ ಮಂಡಿಸಲಾಯಿತು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಸಿಂಡಿಕೇಟ್ ಅನುಮೋದನೆ ಪಡೆಯದೇ ಸಂದರ್ಶನ ನಡೆಸಲಾಗಿದೆ. ಶ್ರೀ ಪಾಲಾಕ್ಷನಾಯ್ಕ ಎನ್.ಜೆ. ಮತ್ತು ಶ್ರೀ ಎಂ.ಚಂದ್ರಕಾಂತ ವಿರುದ್ಧ ದೂರುಗಳಿವೆ. ಆದುದರಿಂದ ಪ್ರಮೋಷನ್ ನೀಡಿರುವುದನ್ನು ಹಿಂಪಡೆಯಬೇಕು ಎಂದರು. ಕುಲಸಚಿವರು ಮಾತನಾಡಿ, ಹಿಂದಿನ ಹಲವಾರು ಸಿಂಡಿಕೇಟ್ ಸಭೆಗಳಲ್ಲಿ ಉಪಕುಲಸಚಿವರ ಹುದ್ದೆಗೆ ಬಡ್ತಿ ನೀಡುವಂತೆ ಸದಸ್ಯರು ಪ್ರಸ್ತಾಪಿಸಿದ್ದಾರೆ. ಅಲ್ಲದೇ, ಸುಮಾರು 31 ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಉಪಕುಲಸಚಿವ ಹುದ್ದೆಗೆ ಸಂದರ್ಶನ ನಡೆಸಿರುವುದಿಲ್ಲ ಹಾಗೂ ಬಡ್ತಿ ನೀಡಿಲ್ಲ. ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡದಿದ್ದಲ್ಲಿ ತೊಂದರೆಯಾಗುತ್ತದೆ. ವಿಶ್ವವಿದ್ಯಾಲಯಕ್ಕೆ 11 ಉಪಕುಲಸಚಿವ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 01 ಹುದ್ದೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ದಾವಣಗೆರೆ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡಿದ್ದು, 10 ಹುದ್ದೆಗಳು ಮಾತ್ರ ಲಭ್ಯವಿದೆ. ಇವು ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳಾಗಿವೆ. 08 ಉಪಕುಲಸಚಿವ ಹುದ್ದೆಗಳಿಗೆ ಬಡ್ತಿ ನೀಡಿದಲ್ಲಿ ಕೆಳಹಂತದ ಸುಮಾರು 40 ನೌಕರರಿಗೆ ಬಡ್ತಿ ನೀಡಲು ಅವಕಾಶವಾಗುತ್ತದೆ. ಶ್ರೀ ಎನ್.ಜೆ.ಪಾಲಾಕ್ಷನಾಯ್ಕ ವಿರುದ್ಧ ಎಫ್.ಐ.ಆರ್. ಆಗಿತ್ತು. ಆದರೆ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸದರಿ ಎಫ್.ಐ.ಆರ್. ವಜಾಗೊಂಡಿದೆ. ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ಶಿಕ್ಷೆಯ ಆದೇಶ ಹೊರಡಿಸಲಾಗಿತ್ತು. ಆದೇಶದಲ್ಲಿ ಅವರನ್ನು ಸಹಾಯಕ ಕುಲಸಚಿವ ಹುದ್ದೆಯ ಜೇಷ್ಠತೆಯಲ್ಲಿ ಕಿರಿಯರಾಗಿ ಇಡಬೇಕು ಹಾಗೂ ಸಹಾಯಕ ಕುಲಸಚಿವ ಹುದ್ದೆಯ ವೇತನ ಶ್ರೇಣಿಯ ಪ್ರಾರಂಭಿಕ ವೇತನವನ್ನು ನಿಗದಿಪಡಿಸಬೇಕೆಂದು ಆದೇಶವಾಗಿರುತ್ತದೆ. ಸದರಿ ಆದೇಶವನ್ನು ಘನತವೆತ್ತ ರಾಜ್ಯಪಾಲರು ಎತ್ತಿ ಹಿಡಿದಿದ್ದು, ಶ್ರೀ ಎನ್.ಜೆ. ಪಾಲಾಕ್ಷನಾಯ್ಕ ಅವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಪ್ರಸ್ತುತ ವಿಶ್ವವಿದ್ಯಾಲಯವು ಅವರ ವಿರುದ್ಧ ಯಾವುದೇ ದಾವೆ ಹೂಡಿಲ್ಲ ಹಾಗೂ ಇಲಾಖಾ ವಿಚಾರಣೆ ನಡೆಸುತ್ತಿಲ್ಲ. ಶ್ರೀ ಚಂದ್ರಕಾಂತ್ ಎಂ. ರವರಿಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಬಡ್ತಿ ಹಾಗೂ ವೇತನ ನಿಗದೀಕರಣಗಳನ್ನು ಮಾಡಲಾಗಿದ್ದು, ಎಲ್ಲರೂ ಅರ್ಹರಿದ್ದಾರೆ ಎಂದರು.

ಮುಂದುವರೆದು ಮಾತನಾಡಿದ ಶ್ರೀ ಕೆ.ಪಿ. ಶ್ರೀಪಾಲ್‌ರವರು, ಶ್ರೀ ಪಾಲಾಕ್ಷನಾಯ್ಕ ಎನ್.ಜೆ. ಮತ್ತು ಶ್ರೀ ಚಂದ್ರಕಾಂತ ಎಂ. ಇವರಿಬ್ಬರನ್ನು ಹೊರತುಪಡಿಸಿ ಉಳಿದವರಿಗೆ ಬಡ್ತಿ ನೀಡಲು ಹಾಗೂ ಅವರುಗಳಿಗೆ ಬಡ್ತಿಯಿಂದ ಲಭ್ಯವಾಗುವ ಸೇವಾ ಸೌಲಭ್ಯಗಳನ್ನು ನೀಡಲು ಆಕ್ಷೇಪಣೆ ಇಲ್ಲ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ಇಬ್ಬರನ್ನು ಹೊರತುಪಡಿಸಿ ಉಳಿದವರಿಗೆ ಬಡ್ತಿ ನೀಡುವುದು ಸರಿಯಲ್ಲ. ಪೆಂಡಿಂಗ್ ಇಡುವುದಾದಲ್ಲಿ ಎಲ್ಲರನ್ನೂ ಪೆಂಡಿಂಗ್ ಇಟ್ಟು ಪರಿಶೀಲಿಸಲು ಅವಕಾಶ ನೀಡಿ. ನಂತರ ನಿರ್ಣಯ ತೆಗೆದುಕೊಳ್ಳಬಹುದು ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ ಕೆಲವರಿಗೆ ಪೆಂಡಿಂಗ್ ಇಟ್ಟು ಉಳಿದವರಿಗೆ ಬಡ್ತಿ ನೀಡುವುದು ಸರಿಯಲ್ಲ. ಇದಕ್ಕೆ ನನ್ನ ವಿರೋಧ ಇದೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್ ಸಹ ಇದಕ್ಕೆ ಧ್ವನಿಗೂಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಶ್ರೀ ಎನ್.ಜೆ. ಪಾಲಾಕ್ಷನಾಯ್ಕ ಮತ್ತು ಶ್ರೀ ಚಂದ್ರಕಾಂತ ಎಂ ಇವರಿಬ್ಬರನ್ನು ಹೊರತುಪಡಿಸಿ ಉಳಿದ 06 ಜನರಿಗೆ ಉಪಕುಲಸಚಿವ ಹುದ್ದೆಗೆ ನೀಡಲಾದ ಬಡ್ತಿಯನ್ನು ಸ್ಥಿರೀಕರಿಸಿ ಬಡ್ತಿಯನ್ನು ಅನುಮೋದಿಸಲಾಯಿತು ಮತ್ತು ಅವರುಗಳಿಗೆ ಲಭ್ಯವಿರುವ ಎಲ್ಲಾ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಅನುಮೋದಿಸಿದ ಸಭೆಯು, ಶ್ರೀ ಎನ್.ಜೆ. ಪಾಲಾಕ್ಷನಾಯ್ಕ ಮತ್ತು ಶ್ರೀ ಚಂದ್ರಕಾಂತ ಎಂ. ಇವರಿಬ್ಬರ ಬಗ್ಗೆ ಇರುವ ದೂರುಗಳ ಬಗ್ಗೆ ಪೂರಕ ದಾಖಲೆಗಳನ್ನು ಕುಲಸಚಿವರಿಗೆ ಅವರಿಬ್ಬರೂ ಸಲ್ಲಿಸಬೇಕು. ಸದರಿಯವರು ಸಲ್ಲಿಸಿರುವ ದಾಖಲೆಗಳನ್ನು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಮತ್ತು ಇನ್ನಿತರೆ ದಾಖಲೆಗಳನ್ನು ಕುಲಸಚಿವರು ಖುದ್ದು ಪರಿಶೀಲಿಸಿ ಸರಿಯಾಗಿದ್ದಲ್ಲಿ/ ಸಮಜಂಸವಾಗಿದ್ದಲ್ಲಿ ಸದರಿಯವರಿಗೂ ಸಹ ಉಪಕುಲಸಚಿವ ಹುದ್ದೆಗೆ ಪರಿಗಣಿಸಿ ವೇತನ ನಿಗದೀಕರಣ ಆದೇಶವನ್ನು ಹೊರಡಿಸಲು ಸಭೆಯು ತೀರ್ಮಾನಿಸಿತು. ಮತ್ತು ತೆಗೆದುಕೊಂಡ ಕ್ರಮಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತರಲು ತೀರ್ಮಾನಿಸಿತು. ಅವರು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ, ಅವುಗಳಲ್ಲಿ ಯಾವುದೇ ಸಮಸ್ಯೆಗಳು ಇಲ್ಲದಿದ್ದಲ್ಲಿ ಅವರಿಬ್ಬರಿಗೂ ಕೂಡ ಬಡ್ತಿಯ ಸೌಲಭ್ಯಗಳನ್ನು ನೀಡಬಹುದು ಎಂದು ನಿರ್ಣಯಿಸಲಾಯಿತು. ಉಳಿದಂತೆ ಉಪಕುಲಸಚಿವ ನೇಮಕಾತಿ ಸಮಿತಿಯ ನಡಾವಳಿಗಳನ್ನು ಅನುಮೋದಿಸಲಾಯಿತು.

**2025–ಸಿಂ–6.22:** ಸ್ನಾತಕೋತ್ತರ ಆಹಾರ ತಂತ್ರಜ್ಞಾನ ವಿಭಾಗಕ್ಕೆ ಸಹ ಪ್ರಾಧ್ಯಾಪಕರ ಹುದ್ದೆಯನ್ನು ಮರು ಹಂಚಿಕೆ ಮಾಡುವ ಕುರಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನಿರ್ಣಯ: ಡಾ. ಪ್ರಶಾಂತ್ ಎಸ್.ಜಿ. ಪ್ರಾಧ್ಯಾಪಕರು, ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರನ್ನು ಕುವೆಂಪು ವಿಶ್ವವಿದ್ಯಾಲಯದ ಆಹಾರ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕರ (ಸಿಎಎಸ್) ಹುದ್ದೆಗೆ ಹುದ್ದೆ ರಹಿತವಾಗಿ ಕೆಲವು ಷರತ್ತಿಗೊಳಪಟ್ಟು ಅಂತರ್ ವಿಶ್ವವಿದ್ಯಾಲಯ ವರ್ಗಾವಣೆ ಮಾಡಿ ಸರ್ಕಾರವು ಆದೇಶ ಹೊರಡಿಸಿರುವ ಮೇರೆಗೆ, ಅವರು ದಿನಾಂಕ:21-06-2025ರ ಪೂರ್ವಾಹ್ನ ವಿಶ್ವವಿದ್ಯಾಲಯದ ಪ್ರಾಧ್ಯಾಪಕ (ವೃತ್ತಿ ಪದೋನ್ನತಿ) ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ಸ್ನಾತಕೋತ್ತರ ಆಹಾರ ತಂತ್ರಜ್ಞಾನ ವಿಭಾಗಕ್ಕೆ ಯಾವುದೇ ಬೋಧಕ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿಲ್ಲದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಇಡಿ 112 ಯುಎಸ್‌ವಿ 2000 ದಿನಾಂಕ:29-07-2000ರಲ್ಲಿ ಹುದ್ದೆಗಳನ್ನು ಅಗತ್ಯತೆಗೆ ಅನುಗುಣವಾಗಿ ಮರು ಹಂಚಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ಸ್ನಾತಕೋತ್ತರ ಹಿಂದಿ ವಿಭಾಗಕ್ಕೆ ಹಂಚಿಕೆ ಮಾಡಲಾದ ಒಂದು ಸಹ ಪ್ರಾಧ್ಯಾಪಕ ಹುದ್ದೆಯನ್ನು ಸ್ನಾತಕೋತ್ತರ ಆಹಾರ ತಂತ್ರಜ್ಞಾನ ವಿಭಾಗಕ್ಕೆ ರೀ-ಡಿಪ್ಲಾಯ್ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**2025-ಸಿಂ-6.23:** ಡಾ. ಸುಧಾ, ಪ್ರಾಧ್ಯಾಪಕರು – ಇವರಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

ನಿರ್ಣಯ: ಡಾ. ಸುಧಾ, ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ ಇವರು "Enhance Precision and Noise Suppression using Permutation – Symmetric Multiqubit States for applications in Quantum Metrology and Sensing" ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿ ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ದಿನಾಂಕ:01-10-2025 ರಿಂದ 31-05-2026ರವರೆಗೆ ಎಂಟು ತಿಂಗಳ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಕೋರಿದ್ದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಸಬ್ಬಾಟಿಕಲ್ ರಜೆಯ ಪರಿನಿಯಮಗಳನ್ವಯ ಅವರು ಅರ್ಹತೆ ಹೊಂದಿರುವುದನ್ನು ಪರಿಗಣಿಸಿ, ಅವರ ಕೋರಿಕೆಯಂತೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಅವರಿಗೆ 08 ತಿಂಗಳುಗಳ ಅವಧಿಯ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸ್ಥಿರೀಕರಿಸಿದ ಸಭೆಯು, ಅವರು ಸಬ್ಬಾಟಿಕಲ್ ರಜೆಯನ್ನು ಮುಗಿಸಿಕೊಂಡು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ರಜಾ ಅವಧಿಯಲ್ಲಿ ಸಿದ್ಧಪಡಿಸಿ ಹೊರತಂದ ಗ್ರಂಥದ ಒಂದು ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಹಾಜರುಪಡಿಸಬೇಕೆಂದು ಷರತ್ತು ವಿಧಿಸಲು ನಿರ್ಣಯಿಸಿತು.

**2025-ಸಿಂ-6.24:** ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ – ಇಲ್ಲಿಗೆ ತಾತ್ಕಾಲಿಕವಾಗಿ ಪ್ರಾಚಾರ್ಯರನ್ನು ನೇಮಕ ಮಾಡಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ ಇಲ್ಲಿನ ಪ್ರಾಂಶುಪಾಲರಾದ ಡಾ. ಹೆಚ್.ಎಂ. ಧರ್ಮೇಗೌಡ, ಇವರಿಗೆ ದಿನಾಂಕ:31-03-2024 ರಂದು 60ನೇ ವಯಸ್ಸಿಗೆ ಕೆ.ಸಿ.ಎಸ್.ಆರ್. ನಿಯಮ 95ರನ್ವಯ ವಯೋನಿವೃತ್ತಿ ಹೊಂದಲು ಅನುಮತಿ ನೀಡಲಾಗಿತ್ತು. ತತ್ಸಂಬಂಧ ಸದರಿಯವರು ವಯೋನಿವೃತ್ತಿ ವಯಸ್ಸನ್ನು 60 ರಿಂದ 62ಕ್ಕೆ ಹೆಚ್ಚಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿ:27-06-2024 ರಂದು ಅಂತಿಮ ಆದೇಶ ಹೊರಡಿಸಿ, ಡಾ. ಹೆಚ್.ಎಂ. ಧರ್ಮೇಗೌಡ ಇವರ ವಯೋನಿವೃತ್ತಿ ವಯಸ್ಸನ್ನು 60 ರಿಂದ 62 ವರ್ಷಕ್ಕೆ ಹೆಚ್ಚಿಸಿರುತ್ತದೆ. ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಅವರನ್ನು ಸದರಿ ಕಾಲೇಜಿನ ಪ್ರಭಾರ ಪ್ರಾಚಾರ್ಯರಾಗಿ ಮುಂದುವರೆಸಲಾಗಿತ್ತು.

ಆದರೆ, ಡಾ. ಹೆಚ್.ಎಂ. ಧರ್ಮೇಗೌಡ ಇವರು ನ್ಯಾಯಾಲಯದ ಆದೇಶದ ಮೇರೆಗೆ 60 ರಿಂದ 62ನೇ ವಯಸ್ಸಿನವರೆಗೆ ಸೇವೆಯಲ್ಲಿ ಮುಂದುವರಿದಿರುವುದರಿಂದ, ಅವರನ್ನು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಭಾರ ಪ್ರಾಚಾರ್ಯರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಹುದ್ದೆಯಿಂದ ಬಿಡುಗಡೆಗೊಳಿಸಿ, ಡಾ. ಮುತ್ತಯ್ಯ, ಎಸ್.ಎಂ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರನ್ನು ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ ಇಲ್ಲಿಗೆ ತಾತ್ಕಾಲಿಕ ಪ್ರಾಚಾರ್ಯರನ್ನಾಗಿ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ನೇಮಕಾತಿ ಮಾಡಿರುವ ಕ್ರಮವನ್ನು ಸಭೆಯ ಅನುಮೋದನೆಗೆ ಮಂಡಿಸಲಾಯಿತು.

ಶ್ರೀ ಹೆಚ್.ಜಿ.ಅರವಿಂದರವರು ಮಾತನಾಡಿ, ಡಾ. ಹೆಚ್.ಎಂ. ಧರ್ಮೇಗೌಡರವರ ಸೇವೆಯನ್ನು 62ನೇ ವಯಸ್ಸಿನವರೆಗೆ ಮುಂದುವರಿಸಲು ನ್ಯಾಯಾಲಯದ ಆದೇಶ ಆಗಿದೆ. ಆದುದರಿಂದ ಅವರನ್ನು ಪ್ರಾಂಶುಪಾಲರ ಹುದ್ದೆಯಿಂದ ಬಿಡುಗಡೆಗೊಳಿಸಿದ್ದು ಸರಿಯಲ್ಲ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಅವರು ಮುಂಬರುವ ಮಾರ್ಚ್-2026ರಲ್ಲಿ ವಯೋನಿವೃತ್ತಿ ಹೊಂದಲಿದ್ದು, ಕೇವಲ 06 ತಿಂಗಳ ಅವಧಿ ಮಾತ್ರ ಉಳಿದಿದೆ. ಅಲ್ಲಿಯವರೆಗೆ ಅವಕಾಶ ನೀಡಿ, ನಂತರ ಬೇರೆಯವರನ್ನು ನೇಮಕ ಮಾಡಬಹುದಾಗಿತ್ತು. ಈ ಹಿಂದೆ ಈ ರೀತಿ ಪ್ರಾಂಶುಪಾಲರನ್ನು ಬದಲಿಸಿರಲಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ನ್ಯಾಯಾಲಯವು ಸೇವೆಯಲ್ಲಿ ಮುಂದುವರಿಸುವಂತೆ ಆದೇಶ ನೀಡಿದೆ. ಆದರೆ, ಪ್ರಾಂಶುಪಾಲರ ಹುದ್ದೆಯಲ್ಲಿ ನಿವೃತ್ತಿಯವರೆಗೆ ಮುಂದುವರಿಸಬೇಕೆಂದಿಲ್ಲ. ಕಾಲೇಜಿನಲ್ಲಿ ಅವರ ವಿರುದ್ಧ ದೂರುಗಳಿವೆ. ಆದುದರಿಂದ, ಅವರನ್ನು ಬದಲಿಸಿ ತಾತ್ಕಾಲಿಕ ಪ್ರಾಂಶುಪಾಲರನ್ನು ನೇಮಕ ಮಾಡಿದೆ ಎಂದರು.

ಶ್ರೀ ಹೆಚ್.ಜಿ.ಅರವಿಂದರವರು ಮುಂದುವರೆದು ಮಾತನಾಡಿ, ಡಾ.ಹೆಚ್.ಎಂ. ಧರ್ಮೇಗೌಡರವರು ತಪ್ಪು ಮಾಡಿದ್ದಲ್ಲಿ ಅವರಿಗೆ ನೋಟೀಸ್ ನೀಡಿ ಅವರ ವಿರುದ್ಧ ಕ್ರಮ ಜರುಗಿಸಿ, ಬದಲಾಯಿಸುವುದು ಅನಿವಾರ್ಯವಾಗಿದ್ದಲ್ಲಿ ಅಧ್ಯಾಪಕರ ಜೇಷ್ಠತೆ ಪರಿಗಣಿಸಿ, ಸೇವೆಯಲ್ಲಿ ಕಿರಿಯರಾಗಿರುವ ಡಾ. ಮುತ್ತಯ್ಯ ಎಸ್.ಎಂ. ಬದಲಿಗೆ ಬೇರೆ ಅರ್ಹ ಪ್ರಾಧ್ಯಾಪಕರನ್ನು ನೇಮಕ ಮಾಡಬೇಕಾಗಿತ್ತು ಎಂದರು ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಶ್ರೀ ಶಶಿಧರ ಬಿ.ಎನ್.ರವರು ಮಾತನಾಡಿ, ಧರ್ಮೇಗೌಡರನ್ನು ಏಕೆ ಬದಲಿಸಲಾಯಿತು? ಇದು ಘಟಕ ಕಾಲೇಜಲ್ಲ. ನೇರ ಆಡಳಿತಕ್ಕೊಳಪಟ್ಟ ಕಾಲೇಜು ಆಗಿರುವುದರಿಂದ ಪ್ರಾಂಶುಪಾಲರ ನೇಮಕಕ್ಕೆ ಇರುವ ನಿಯಮಗಳೇನು? ಮತ್ತು ಡಾ.ಮುತ್ತಯ್ಯ ಎಸ್.ಎಂ.ರವರನ್ನು ಪ್ರಾಂಶುಪಾಲರಾಗಿ ನೇಮಕ ಮಾಡಲು ಅನುಸರಿಸಿದ ಮಾನದಂಡಗಳೇನು, ಜೇಷ್ಠತೆ ಆಧಾರದಲ್ಲಿ ನೇಮಕ ಮಾಡಲಾಗಿದೆಯೇ ಎಂಬ ವಿವರ ನೀಡಿ ಎಂದರು.

ಕುಲಸಚಿವರು ಮಾತನಾಡಿ, ದಿನಾಂಕ:12-02-2008ರ ಸರ್ಕಾರದ ಆದೇಶದಲ್ಲಿ ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಾಲೇಜನ್ನು ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಡಿಸಿದ್ದು, ದಿನಾಂಕ:26-04-2008 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಸದರಿ ಕಾಲೇಜಿನ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರ ಸೇವಾ ಜೇಷ್ಠತೆಯನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದೆ. ಕಾಲೇಜಿನ ಬಹಳಷ್ಟು ಬೋಧಕರು ಈಗಾಗಲೇ ವಯೋನಿವೃತ್ತಿ ಹೊಂದಿದ್ದು, ಉಳಿದವರು ಕೂಡ ಇನ್ನೊಂದು ವರ್ಷದಲ್ಲಿ ನಿವೃತ್ತಿ ಹೊಂದಲಿದ್ದಾರೆ. ಖಾಲಿ ಹುದ್ದೆಗಳಿಗೆ ನೇಮಕಾತಿ ಆಗದೇ ಇರುವುದರಿಂದ ಸದರಿ ಕಾಲೇಜಿಗೆ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಅಧ್ಯಾಪಕರನ್ನು ನಿಯೋಜಿಸಲು ಹಾಗೂ ಘಟಕ ಕಾಲೇಜುಗಳು ಹಾಗೂ ನೇರ ಆಡಳಿತಕ್ಕೊಳಪಟ್ಟ ಕಾಲೇಜಿಗೆ ಪ್ರಾಂಶುಪಾಲರ ಹುದ್ದೆ ಸೃಜನೆ ಸಂಬಂಧ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪರಿನಿಯಮ ಇನ್ನೂ ಅನುಮೋದನೆಯಾಗದಿರುವ ಹಿನ್ನೆಲೆಯಲ್ಲಿ ಯು.ಎಸ್.ಎಂ.ಆರ್. ಕಾಲೇಜಿಗೆ ಘಟಕ ಕಾಲೇಜುಗಳ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನುಸಾರ ಪ್ರಾಧ್ಯಾಪಕರನ್ನು ಪ್ರಾಂಶುಪಾಲರಾಗಿ ನೇಮಕ ಮಾಡಲು ಅನುಮತಿಗಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ಬಹುತೇಕ ಸದಸ್ಯರು ಡಾ.ಮುತ್ತಯ್ಯ ಎಸ್.ಎಂ. ರವರನ್ನು ಯು.ಎಸ್.ಎಂ.ಆರ್. ಕಾಲೇಜಿನ ಪ್ರಾಂಶುಪಾಲರಾಗಿ ನೇಮಕ ಮಾಡಿದ ಕ್ರಮವನ್ನು ವಿರೋಧಿಸಿದರು ಹಾಗೂ ನೇಮಕಾತಿ ಆದೇಶವನ್ನು ಅನುಮೋದಿಸಿ ಸ್ಥಿರೀಕರಿಸಲು ನಿರಾಕರಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ನಿರ್ಣಯ: ಸುದೀರ್ಘ ಚರ್ಚೆಯ ನಂತರವೂ ಶಂಕರಘಟ್ಟದ ಯು.ಎಸ್.ಎಂ.ಆರ್. ಕಾಲೇಜಿನ ಪ್ರಾಂಶುಪಾಲರಾಗಿ ಡಾ.ಮುತ್ತಯ್ಯ ಎಸ್.ಎಂ. ರವರನ್ನು ನೇಮಕ ಮಾಡಿದ ಕ್ರಮವನ್ನು ಸ್ಥಿರೀಕರಿಸಲು ಸದಸ್ಯರು ನಿರಾಕರಿಸಿದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಯವರು ನನ್ನ ಓವರ್ ರೈಟಿಂಗ್ ಪವರ್ ಉಪಯೋಗಿಸಿ ಪ್ರಾಂಶುಪಾಲರಾಗಿ ಡಾ.ಮುತ್ತಯ್ಯ ಎಸ್.ಎಂ.ರವರನ್ನು ನೇಮಕ ಮಾಡಿರುವುದನ್ನು ಸ್ಥಿರೀಕರಿಸಿರುವುದಾಗಿ ತಿಳಿಸಿದರು.

2025-ಸಿಂ-6.24(ಎ): ಡಾ. ಕೆ.ಆರ್.ಮಂಜುನಾಥ್, ಪ್ರಾಧ್ಯಾಪಕರು – ಇವರಿಗೆ ಸಬ್ಬಾಟಿಕಲ್ ರಜೆ ಮಂಜೂರು ಮಾಡಿರುವ ದಿನಾಂಕದ ಪರಿಷ್ಕರಣೆ ಕುರಿತು.

ಚರ್ಚೆ: ಪ್ರೊ. ಸಾಕಮ್ಮರವರು ಮಾತನಾಡುತ್ತಾ, ಎಂ.ಬಿ.ಎ. ವಿಭಾಗದಲ್ಲಿ ಖಾಯಂ ಅಧ್ಯಾಪಕರುಗಳ ಕೊರತೆ ಇರುವುದು ತಿಳಿದುಬಂದಿದ್ದು, ಸದರಿ ಅಧ್ಯಾಪಕರು ಸಬ್ಬಾಟಿಕಲ್ ರಜೆಯ ಮೇಲೆ ಹೋದಲ್ಲಿ ವಿದ್ಯಾರ್ಥಿಗಳಿಗೆ ಬೋಧನೆಯಲ್ಲಿ ಕೊರತೆಯಾಗಬಹುದು. ಡಾ. ಮಂಜುನಾಥ್ ರವರಿಗೆ ಹೆಚ್ಚಿನ ಸೇವಾ ಅವಧಿ ಇರುವುದರಿಂದ ಸದರಿಯವರಿಗೆ ಸಬ್ಬಾಟಿಕಲ್ ರಜೆಯನ್ನು ನಂತರದ ದಿನಗಳಲ್ಲಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಬಹುದು ಎಂದರು. ಪ್ರೊ. ಹಿರೇಮಣಿನಾಯ್ಕ ರವರು ಮಾತನಾಡುತ್ತಾ, ಸಂಶೋಧನೆಯ ಹಿನ್ನೆಲೆಯಲ್ಲಿ ಸಬ್ಬಾಟಿಕಲ್ ರಜೆಯನ್ನು ಮಂಜೂರಿಸಬಹುದು ಎಂದರು.

ನಿರ್ಣಯ: ಕೆ.ಆರ್.ಮಂಜುನಾಥ್, ಪ್ರಾಧ್ಯಾಪಕರು, ಸ್ನಾತಕೋತ್ತರ ವ್ಯವಹಾರ ನಿರ್ವಹಣೆ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು "Investment Management and Corporate Communication" ಎಂಬ ವಿಷಯದ ಕುರಿತು ಅಧ್ಯಯನ ನಡೆಸಿ ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ದಿನಾಂಕ:01-04-2026 ರಿಂದ 31-03-2027ರ ವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡಲು ದಿನಾಂಕ:12-08-2025 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಆದರೆ, ಅವರು ಪ್ರಾಧ್ಯಾಪಕರಾಗಿ ದಿನಾಂಕ:27-07-2026ಕ್ಕೆ ಮೂರು ವರ್ಷಗಳು ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ, ಸಬ್ಬಾಟಿಕಲ್ ರಜಾ ಅವಧಿಯನ್ನು ಪರಿಷ್ಕರಿಸಿ, ದಿನಾಂಕ:28-07-2026 ರಿಂದ 27-07-2027ರವರಗೆ ಮಂಜೂರು ಮಾಡಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

<u>ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು</u>

2025-ಸಿಂ-6.25: ಮಾನ್ಯ ಸಿಂಡಿಕೇಟ್ ಸದಸ್ಯರ ಪ್ರಸ್ತಾವನೆ / ಉತ್ತರ

1) ಡಾ. ಮಧು ಜಿ.

2) ಪ್ರೊ. ಸಾಕಮ್ಮ ಬಿ.

2025-ಸಿಂ-6.25(1): **ಡಾ. ಮಧು, ಜಿ.**

ಡಾ. ಜಿ. ಮಧುರವರು ಮಾತನಾಡಿ, 2022-24ನೇ ಶೈಕ್ಷಣಿಕ ಸಾಲಿನಲ್ಲಿ ಬಿ.ಇಡಿ. ಪದವಿ ವ್ಯಾಸಂಗ ಮುಗಿಸಿರುವ ವಿದ್ಯಾರ್ಥಿಗಳಿಗೆ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್‌ನ ಅಂಕಪಟ್ಟಿಗಳನ್ನು ವಿತರಿಸದೇ ಇರುವುದರಿಂದ ಉದ್ಯೋಗ ಹಾಗೂ ಉನ್ನತ ವ್ಯಾಸಂಗಕ್ಕೆ ತೊಂದರೆಯಾಗುತ್ತಿದೆ ಎಂದರು. ಮುಂದುವರೆದು ಮಾತನಾಡಿದ ಅವರು ವಿಶ್ವವಿದ್ಯಾಲಯವು ಒದಗಿಸಿರುವ ಕೆಲವು ಅಂಕಪಟ್ಟಿಗಳಲ್ಲಿ ಬಾರ್‌ಕೋಡ್ ಮುದ್ರಿತವಾಗಿಲ್ಲ. ಅಂತಹ ಅಂಕಪಟ್ಟಿಗಳನ್ನು ಪರೀಕ್ಷಾ ವಿಭಾಗಕ್ಕೆ ಹಿಂದಿರುಗಿಸಿ ಬಹಳ ದಿನಗಳಾಗಿವೆ. ಆದರೆ, ಈವರೆಗೂ ಪರಿಷ್ಕೃತ ಅಂಕಪಟ್ಟಿಗಳು ಕಾಲೇಜುಗಳಿಗೆ ಬಂದಿಲ್ಲ. ಅಂಕಪಟ್ಟಿಗಳು ತಪ್ಪಾಗಿ ಮುದ್ರಿತವಾಗಲು ಕಾರಣಕರ್ತರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ನಿರ್ಣಯ: ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಕೆಲವು ಅಂಕಪಟ್ಟಿಗಳಲ್ಲಿ ನ್ಯೂನತೆಗಳು ಕಂಡುಬಂದಿದ್ದು, ಸದರಿ ನ್ಯೂನತೆಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲಾಗಿದ್ದು, 2022-24ನೇ ಸಾಲಿನ 2 ಮತ್ತು 4ನೇ ಸೆಮಿಸ್ಟರ್‌ನ ಅಂಕಪಟ್ಟಿಗಳನ್ನು ಮುದ್ರಿಸಲಾಗುತ್ತಿದ್ದು, ಶೀಘ್ರವೇ ಕಾಲೇಜುಗಳಿಗೆ ಕಳುಹಿಸಲಾಗುವುದು ಎಂದರು. ಬಾರ್‌ಕೋಡ್ ಇಲ್ಲದ ಅಂಕಪಟ್ಟಿಗಳನ್ನು ಸರಿಪಡಿಸಿ ಕಳುಹಿಸುವ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

2025-ಸಿಂ-6.25(1ಎ): ಡಾ.ಜಿ. ಮಧುರವರು ಮಾತನಾಡಿ, 2021-23ನೇ ಶೈಕ್ಷಣಿಕ ಸಾಲಿನ ಬಿ.ಇಡಿ., ಪದವಿ ವ್ಯಾಸಂಗ ಮುಗಿಸಿರುವ ವಿದ್ಯಾರ್ಥಿಗಳಿಗೆ 34ನೇ ಘಟಿಕೋತ್ಸವ ಮುಗಿದು 8 ತಿಂಗಳು ಕಳೆದರೂ ಪದವಿ ಪ್ರಮಾಣಪತ್ರಗಳನ್ನು ವಿತರಿಸಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದರು.

ಚರ್ಚೆ: ಶ್ರೀ ಅರವಿಂದ ಹೆಚ್.ಜಿ. ರವರು ಮಾತನಾಡಿ, ಎನ್.ಇ.ಪಿ., ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಆದಷ್ಟು ಬೇಗನೆ ಘಟಿಕೋತ್ಸವ ನಡೆಸಿ ಪದವಿ ಪ್ರಮಾಣಪತ್ರ ನೀಡಿ ಎಂದರು.

ನಿರ್ಣಯ: ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಪದವಿ ಪ್ರಮಾಣಪತ್ರಗಳ ಮ್ಯಾಪಿಂಗ್ ಕಾರ್ಯ ಮುಗಿದಿದ್ದು, 34ನೇ ಘಟಿಕೋತ್ಸವದ ಬಿ.ಇಡಿ. ಪದವಿಯ ವಿದ್ಯಾರ್ಥಿಗಳ ಪದವಿ ಪ್ರಮಾಣ ಪತ್ರಗಳು ಮುದ್ರಣ ಹಂತದಲ್ಲಿದ್ದು, ಸದ್ಯದಲ್ಲಿಯೆ ಕಾಲೇಜುಗಳಿಗೆ ಕಳುಹಿಸಲಾಗುವುದು ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2025-ಸಿಂ-6.25(1ಬಿ): ಡಾ.ಜಿ. ಮಧುರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ನೀಡಲು ವಿಶ್ವವಿದ್ಯಾಲಯವು ವಿಳಂಬ ಮಾಡುತ್ತಿದೆ. ಮೌಲ್ಯಮಾಪನ ಕಾರ್ಯವು ಕೂಡ ವಿಳಂಬವಾಗುತ್ತಿದೆ. ಈ ಹಿಂದೆ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲಿಯೇ ಮೌಲ್ಯಮಾಪನ ಕೂಡ ಆರಂಭವಾಗುತ್ತಿತ್ತು. ಈಗ ಪರೀಕ್ಷೆ ಮುಗಿದು ತಿಂಗಳುಗಟ್ಟಲೆಯಾದರೂ ಮೌಲ್ಯಮಾಪನ ಆರಂಭಿಸಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದರು.

ಮಾಹಿತಿ: ಸರ್ಕಾರದ ಏಕರೂಪ ಪರೀಕ್ಷಾ ಶುಲ್ಕ ಮತ್ತು ಸಂಭಾವನೆ ದರಗಳನ್ನು ಜಾರಿಗೊಳಿಸಿದ್ದು, ಅದರಲ್ಲಿನ ಕೆಲವು ತೊಡಕುಗಳಿಂದ ಅಧ್ಯಾಪಕರು ಮೌಲ್ಯಮಾಪನ ಕಾರ್ಯವನ್ನು ಆರಂಭಿಸಿರಲಿಲ್ಲ. ಪ್ರಸ್ತುತ ಮೌಲ್ಯಮಾಪನ ಮುಗಿದಿದ್ದು, ಫಲಿತಾಂಶವನ್ನು ಪ್ರಕಟಿಸಲಾಗುತ್ತಿದೆ ಎಂಬುದನ್ನು ಸದಸ್ಯರಿಗೆ ತಿಳಿಸಲಾಯಿತು.

2025-ಸಿಂ-6.25(1ಸಿ): ಡಾ.ಜಿ. ಮಧುರವರು ಮಾತನಾಡಿ, ಕಳೆದ ಡಿಸೆಂಬರ್-2024ರಲ್ಲಿ ಬಿ.ಇಡಿ. ನಾಲ್ಕನೇ ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗಳು ಮುಗಿದು 10 ತಿಂಗಳುಗಳಾದರೂ ಸಂಭಾವನೆಯನ್ನು ಈವರೆಗೂ ಪಾವತಿಸದೇ ಬಿಲ್ಲುಗಳನ್ನು ತಡೆಹಿಡಿಯಲಾಗಿದೆ. ಇದರಿಂದ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಿಕೊಟ್ಟ ಶಿಕ್ಷಕರು ಮುಂದಿನ ಪರೀಕ್ಷೆಗಳನ್ನು ನಡೆಸಲು ಹಿಂದೇಟು ಹಾಕುತ್ತಿದ್ದಾರೆ. ಇದರ ಪರಿಣಾಮವನ್ನು ಕಾಲೇಜುಗಳು ಮತ್ತು ವಿದ್ಯಾರ್ಥಿಗಳು ಎದುರಿಸಬೇಕಾಗಿದೆ. ಶುಲ್ಕ ಮತ್ತು ಸಂಭಾವನೆ ದರಗಳು ಸಿಂಡಿಕೇಟ್‌ನಲ್ಲಿ ಅನುಮೋದನೆಯಾಗಿದ್ದು, ಪರೀಕ್ಷಾ ವಿಭಾಗದಿಂದ ಆದೇಶ ಕೂಡ ಹೊರಡಿಸಲಾಗಿದೆ. ಆದರೆ ಹಣಕಾಸು ವಿಭಾಗದಲ್ಲಿ ಬಿಲ್ಲುಗಳನ್ನು ತಿರಸ್ಕರಿಸುತ್ತಿದ್ದಾರೆ. ಹೀಗಾದಲ್ಲಿ ಸಿಂಡಿಕೇಟ್ ನಿರ್ಣಯಗಳಿಗೆ ಬೆಲೆ ಇಲ್ಲವೇ? ಎಂದರು.

ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳು ಮಾತನಾಡಿ, ಡಿಸೆಂಬರ್-2024ರ ಬಿ.ಇಡಿ., ನಾಲ್ಕನೇ ಸೆಮಿಸ್ಟರ್‌ಗೆ ಸಂಬಂಧಿಸಿದ ಪ್ರಾಯೋಗಿಕ ಪರೀಕ್ಷೆಗಳ ಬಿಲ್ಲುಗಳಲ್ಲಿ ದಿನಾಂಕ:01-01-2025ರಿಂದ ಅನ್ವಯವಾಗುವ ಏಕರೂಪ ಪರೀಕ್ಷಾ ಶುಲ್ಕ ಮತ್ತು ಸಂಭಾವನೆ ಮೊತ್ತವನ್ನು ನಮೂದಿಸಲಾಗಿದ್ದು, ಸದರಿ ಬಿಲ್ಲುಗಳನ್ನು ಈ ಹಿಂದೆ ವಿಶ್ವವಿದ್ಯಾಲಯದ ಆದೇಶದ ಮೊತ್ತಗಳನ್ನು ನಮೂದಿಸಿ ಸಲ್ಲಿಸುವಂತೆ ಹಾಗೂ ಪ್ರಾಯೋಗಿಕ ಪರೀಕ್ಷೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಉಪನ್ಯಾಸಕರ ಬಿಲ್ಲುಗಳನ್ನು ಗಣಕೀಕೃತ ಬಿಲ್ಲಿನಲ್ಲಿ ಸಲ್ಲಿಸುವಂತೆ ಈಗಾಗಲೇ ಸಲ್ಲಿಸಲಾದ ಬಿಲ್ಲುಗಳನ್ನು ಸಂಬಂಧಪಟ್ಟ ಬಿ.ಇಡಿ. ಕಾಲೇಜುಗಳಿಗೆ ಹಿಂದಿರುಗಿಸಲಾಗಿದೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಸರ್ಕಾರದ ಏಕರೂಪದ ಶುಲ್ಕ ಮತ್ತು ಸಂಭಾವನೆ ದರಗಳು ಹಾಗೂ ವಿಶ್ವವಿದ್ಯಾಲಯ ನಿಗದಿಪಡಿಸಿರುವ ದರಗಳಲ್ಲಿ ವ್ಯತ್ಯಾಸವಿದೆ. ವಿಶ್ವವಿದ್ಯಾಲಯವು ಸರ್ಕಾರದ ಆದೇಶಗಳನ್ನು ಕೂಡ ಪಾಲಿಸಬೇಕು. ಸರ್ಕಾರದ ಆದೇಶ ಮೀರಿದಲ್ಲಿ ಆಡಿಟ್ ಆಕ್ಷೇಪಣೆಯಾಗುತ್ತದೆ ಎಂದರು.

ಡಾ.ಜಿ. ಮಧುರವರು ಮುಂದುವರೆದು ಮಾತನಾಡಿ, ಸರ್ಕಾರ ಮತ್ತು ವಿಶ್ವವಿದ್ಯಾಲಯ ನಿಗದಿಪಡಿಸಿರುವ ದರಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಭೆಯ ನಿರ್ಣಯವನ್ನು ಹಿಂಪಡೆಯುವಂತೆ ಸೂಕ್ತ ತಿದ್ದುಪಡಿ ಹಾಗೂ ಶಿಫಾರಸ್ಸುಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಿ. ಏನಾದರೊಂದು ತೀರ್ಮಾನ ಆಗಬೇಕು ಎಂದರು.

ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರರವರು ಮಾತನಾಡಿ, ಕಾಲೇಜಿನಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಸಂಭಾವನೆ ಬಿಲ್ಲುಗಳನ್ನು ಪಾವತಿಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದ್ದು, ಅವು ಪಾವತಿಯಾಗದೇ ಹಿಂದಿರುಗಿ ಬರುತ್ತಿವೆ. ಇದರಿಂದ ಪರೀಕ್ಷಾ ಕಾರ್ಯ ನಿರ್ವಹಿಸಲು ಅಧ್ಯಾಪಕರು ಹಿಂದೇಟು ಹಾಕುತ್ತಿದ್ದಾರೆ ಎಂದರು. ಡಿಜಿಟಲ್ ಮೌಲ್ಯಮಾಪನಕ್ಕೆ ಅತಿಥಿ ಉಪನ್ಯಾಸಕರನ್ನು ಅವಲಂಬಿಸಬೇಕು. ಅವರಿಂದ ಮೌಲ್ಯಮಾಪನ ಮಾಡಿಸಲಾಗಿದೆ. ಆದರೆ, ಅವರಿಗೆ ಈವರೆಗೂ ಸಂಭಾವನೆ ಪಾವತಿಸಿಲ್ಲ. ಸಂಬಂಧಪಟ್ಟ ಅಧ್ಯಾಪಕರಿಗೆ ಲಿಂಕ್ ಒದಗಿಸಿಲ್ಲ. ಮೌಲ್ಯಮಾಪಕರು ಪ್ರಾಂಶುಪಾಲರನ್ನು ಪ್ರಶ್ನಿಸುತ್ತಿದ್ದಾರೆ. ತಮ್ಮ ದೈನಂದಿನ ಪಾಠ ಪ್ರವಚನಗಳ ಜೊತೆಗೆ ವಿರಾಮದ ವೇಳೆಯಲ್ಲಿ ಹಾಗೂ ರಜಾ ದಿನಗಳಲ್ಲಿ ಮೌಲ್ಯಮಾಪನ ಮಾಡಿದ್ದಾಗ್ಯೂ ಸಂಭಾವನೆ ಪಾವತಿಸುತ್ತಿಲ್ಲ ಎಂದರು. ಶ್ರೀ ಉಲ್ಲಾಸ್ ಇ.ಜಿ. ರವರು ಮಾತನಾಡಿ ತಮ್ಮ ಕಾಲೇಜಿನಲ್ಲಿ ಕೂಡ ಇದೇ ಪರಿಸ್ಥಿತಿ ಇದ್ದು, ಪರೀಕ್ಷಾ ಕಾರ್ಯ ಮಾಡಿಸುವುದು ಕಷ್ಟವಾಗಿದೆ ಎಂದರು.

ಈ ಕುರಿತು ಪರಿಶೀಲಿಸಿ ಸೂಕ್ತ ಕ್ರಮವಹಿಸುವುದಾಗಿ ಮಾನ್ಯ ಕುಲಪತಿಗಳು ತಿಳಿಸಿದರು.

**2025–ಸಿಂ–6.25(2):** **ಶ್ರೀಮತಿ ಸಾಕಮ್ಮ ಬಿ.**

ಶ್ರೀಮತಿ ಸಾಕಮ್ಮ, ಬಿ.ರವರು ಮಾತನಾಡಿ, ದಿನಾಂಕ:12–08–2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಗೌರವ ಡಾಕ್ಟರೇಟ್ ಆಯ್ಕೆ ಕಮಿಟಿಯಲ್ಲಿ ಶ್ರೀಮತಿ ಸಾಕಮ್ಮ ಬಿ. ಮತ್ತು ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರ ಹೆಸರುಗಳನ್ನು ಸೂಚಿಸಲಾಗಿ ಅಂಗೀಕರಿಸಲಾಗಿತ್ತು. ಆದರೆ, ನಡಾವಳಿಯಲ್ಲಿ ಅವರ ಬದಲಾಗಿ ಬೇರೆಯವರ ಹೆಸರನ್ನು ದಾಖಲಿಸಲಾಗಿದೆ ಎಂದರು.

**ನಿರ್ಣಯ:** ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀಮತಿ ಸಾಕಮ್ಮ ಬಿ. ರವರ ಹೆಸರನ್ನು ಸೂಚಿಸಲಾಗಿತ್ತು. ಆದರೆ, ಅಂಗೀಕರಿಸಿರಲಿಲ್ಲ. ಘಟಿಕೋತ್ಸವದ ದಿನಾಂಕ ಇನ್ನೂ ನಿಗದಿಯಾಗಿಲ್ಲವಾದ್ದರಿಂದ ಗೌರವ ಡಾಕ್ಟರೇಟ್‌ಗೆ ಬಂದಿರುವ ಅರ್ಜಿಗಳ ಪರಿಶೀಲನಾ ಸಮಿತಿ ಸಭೆ ಇನ್ನೂ ನಡೆದಿಲ್ಲ. ಆದುದರಿಂದ, ಸಮಿತಿಗೆ ಶ್ರೀಮತಿ ಸಾಕಮ್ಮ, ಬಿ. ರವರ ಹೆಸರನ್ನು ಕೂಡ ಸಮಿತಿಗೆ ಸೇರಿಸಲಾಗುವುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿ ಸೂಚಿಸಿದರು.

**2025–ಸಿಂ–6.25(2ಎ):** ಶ್ರೀಮತಿ ಸಾಕಮ್ಮ ಬಿ.ರವರು ಮಾತನಾಡಿ, ಸಿಂಡಿಕೇಟ್ ಸಭಾ ನಡಾವಳಿಗಳು ಕೈಸೇರಲು ಒಂದು ತಿಂಗಳ ಮೇಲಾಗುತ್ತದೆ. ಹಾಗಾಗಿ ಚರ್ಚಿಸಲಾದ ವಿಷಯಗಳು ಬದಲಾಗುತ್ತಿದೆ. ತಕ್ಷಣವೇ ಒಂದು ವಾರದ ಒಳಗೆ ನಡಾವಳಿಗಳು ಸಿಗುವ ಹಾಗೆ ಕ್ರಮಕೈಗೊಳ್ಳುವುದು ಹಾಗೂ ಸಭಾ ನಡಾವಳಿಗಳ ಬಗ್ಗೆ ಗೌಪ್ಯತೆ ಕಾಪಾಡುವುದು ಅಗತ್ಯ ಎಂದರು.

**ನಿರ್ಣಯ:** ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯ ಅಜೆಂಡಾಗಳು ಇರುತ್ತವೆ. ಸಭೆಯಲ್ಲಿ ಸುದೀರ್ಘ ಚರ್ಚೆಗಳಾಗುತ್ತವೆ. ಅಲ್ಲದೇ ಸದಸ್ಯರ ಅಭಿಪ್ರಾಯಗಳನ್ನು ಕೂಡಾ ನಡಾವಳಿಗಳಲ್ಲಿ ದಾಖಲಿಸಬೇಕೆಂಬ ಆಗ್ರಹ ಇರುತ್ತದೆ. ಈ ಹಿನ್ನೆಲೆಯಲ್ಲಿ ನಡಾವಳಿಗಳು ಸದಸ್ಯರ ಕೈಸೇರುವುದು ಸ್ವಲ್ಪ ವಿಳಂಬವಾಗುತ್ತಿದೆ. ಮುಂದಿನ ದಿನಗಳಲ್ಲಿ ಶೀಘ್ರವಾಗಿ ಕಳುಹಿಸಲು ಕ್ರಮ ವಹಿಸಲಾಗುವುದು ಎಂದರು. ಮುಂದುವರೆದು ಮಾತನಾಡಿದ ಕುಲಸಚಿವರು, ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿದೆ. ಹೀಗಾಗಿ ವೆಬ್‌ಸೈಟ್‌ನಲ್ಲಿ ಪ್ರಕಟವಾದ ನಂತರ ಗೌಪ್ಯತೆ ಉಳಿಯುವುದಿಲ್ಲ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

2025–ಸಿಂ–6.25(28): ನ್ಯಾಕ್ ಸಂದರ್ಭದಲ್ಲಿ ವಿಶ್ವವಿದ್ಯಾಲಯದಲ್ಲಿ ನಡೆದ ವಿವಿಧ ಇಲಾಖೆಗಳ ಕಾಮಗಾರಿಗಳ ಪ್ರಗತಿ ಮತ್ತು ಅವುಗಳ ಮೇಲೆ ಮಾಡಲಾದ ವೆಚ್ಚಗಳ ಬಗ್ಗೆ ಮಾಹಿತಿ ಒದಗಿಸುವಂತೆ ಶ್ರೀಮತಿ ಸಾಕಮ್ಮರವರು ಕೇಳಿದರು.

ಮಾನ್ಯ ಸದಸ್ಯರು ಕೇಳಲಾದ ವಿವರಗಳನ್ನು ಇಂಜಿನಿಯರಿಂಗ್ ವಿಭಾಗದಿಂದ ಪಡೆದು ಒದಗಿಸಿರುವುದಾಗಿ ಕುಲಸಚಿವರು ತಿಳಿಸಿದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ ಒಂದೇ ಸಂಸ್ಥೆಗೆ ನಾಲ್ಕೈದು ಕಾಮಗಾರಿಗಳನ್ನು ನೀಡಲಾಗಿದೆ. ಇದನ್ನು ಇ–ಟೆಂಡರ್ ಮಾಡಬಹುದಾಗಿತ್ತು ಎಂದರು. ಕುಲಸಚಿವರು ಮಾತನಾಡಿ, ನ್ಯಾಕ್ ಪೀರ್ ಟೀಮ್ ಭೇಟಿ ಹಿನ್ನೆಲೆಯಲ್ಲಿ ಅತೀ ತುರ್ತು ಅಗತ್ಯವಿದ್ದ ಕೆಲಸಗಳನ್ನು ಸಕಾಲದಲ್ಲಿ ಪೂರೈಸಿಕೊಡಲು ಗುತ್ತಿಗೆದಾರರು ಭಾಗವಹಿಸುತ್ತಿರಲಿಲ್ಲವಾದ್ದರಿಂದ ಕೆ.ಟಿ.ಪಿ.ಪಿ. ನಿಯಮಗಳ ಪ್ರಕಾರ ರೂ.5.00 ಲಕ್ಷಗಳಿಗಿಂತ ಕಡಿಮೆ ಮೊತ್ತದ ಕೆಲಸಗಳನ್ನು ಕೊಟೇಶನ್ ಕರೆದು, ಉಳಿದವರಿಗಿಂತ ಕಡಿಮೆ ದರ ನಮೂದಿಸಿದ್ದವರಿಂದ ನಿರ್ವಹಿಸಲಾಗಿದೆ ಎಂದರು.

ಶ್ರೀ ಶಾಂತಕುಮಾರ್‌ರವರು ಮಾತನಾಡಿ, ಈಗಾಗಲೇ ನ್ಯಾಕ್ ಮುಕ್ತಾಯಗೊಂಡಿದ್ದು, ಈಗ ರೂ.5.00ಲಕ್ಷದೊಳಗೆ ಪೀಸ್‌ವರ್ಕ್ ಮಾಡುತ್ತಿಲ್ಲವೇ? ಎಂದರು. ಕುಲಸಚಿವರು ಮಾತನಾಡಿ, ಹಣಕಾಸಿನ ಸಮಸ್ಯೆ ಇರುವುದರಿಂದ ತುರ್ತು ಅಗತ್ಯತೆ ಹೊರತುಪಡಿಸಿ ಸಾಮಾನ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲ. ಇನ್ನು ಮುಂದೆ ಚಿಕ್ಕಪುಟ್ಟ ಕೆಲಸಗಳನ್ನು ಕೂಡ ಸಿಂಡಿಕೇಟ್‌ಗೆ ಮಂಡಿಸಿ ಅನುಮೋದನೆ ಪಡೆದು ನಿರ್ವಹಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಡಾ.ಜಿ.ಮಧುರವರು ಮಾತನಾಡಿ, ಕೆಲವು ಆಡಳಿತಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳಲು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಅವಕಾಶವಿರುತ್ತದೆ. ಎಲ್ಲವನ್ನೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕೆಂದು ಆಕ್ಷೇಪಿಸುವುದು ಸರಿಯಲ್ಲ ಎಂದರು.

ಶ್ರೀಮತಿ ಸಾಕಮ್ಮರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ಆಯಾ ಕಾಲದಲ್ಲಿಯೇ ನಿರ್ವಹಿಸಿದರೆ ನ್ಯಾಕ್ ಇತ್ಯಾದಿ ಸಮಯಗಳಲ್ಲಿ ತುರ್ತು ಎನ್ನುವ ಅಗತ್ಯ ಇರುವುದಿಲ್ಲ. ಪ್ರತಿ ತಿಂಗಳು ಮತ್ತು ಪ್ರತಿ ವರ್ಷ ಆಗಬೇಕಾದ ಕೆಲಸಕಾರ್ಯಗಳ ಕಾರ್ಯಯೋಜನೆ ಸಿದ್ಧಪಡಿಸಿ ಅದರಂತೆ ಕ್ರಮವಹಿಸಿ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀಮತಿ ಸಾಕಮ್ಮರವರು ನೀಡಿರುವುದು ಉತ್ತಮ ಸಲಹೆಯಾಗಿದ್ದು, ಕಾಲಮಿತಿಯಲ್ಲಿ ಕೆಲಸ ಕಾರ್ಯಗಳ ನಿರ್ವಹಣೆ ಬಗ್ಗೆ ಆಡಳಿತಾಂಗದ ಎಲ್ಲರೂ ಇದನ್ನು ಅನುಸರಿಸುವ ಬಗ್ಗೆ ಕ್ರಮವಹಿಸಲಾಗುವುದು ಎಂದರು.

**2025–ಸಿಂ–6.26: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2025–ಸಿಂ–6.27: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2025–ಸಿಂ–6.27(1): ಶ್ರೀ ಮುಸಾವೀರ್ ಬಾಷಾ:**

**ಎಂ.ಬಿ.ಎ. ವಿದ್ಯಾರ್ಥಿಗಳ ಶುಲ್ಕ ಪಾವತಿ ಕುರಿತು.**

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ಪ್ರವೇಶ ಪಡೆಯುವ ಸಮಯದಲ್ಲಿ ಕೇವಲ ಸರ್ಕಾರ ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಮಾತ್ರ ಪಾವತಿಸಿದ್ದಾರೆ. ಬೋಧನಾ ಶುಲ್ಕ ಸೇರಿದಂತೆ ಇತರೆ ಶುಲ್ಕಗಳು ಸರ್ಕಾರದಿಂದ ಮರುಭರಿಕೆಯಾದ ನಂತರ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು ಎಂಬುದನ್ನು ಪ್ರವೇಶದ ಸಮಯದಲ್ಲಿ ತಿಳಿಸದೇ, ಅವರು ಕೋರ್ಸ್‌ನ ಅಂತಿಮ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಹಂತದಲ್ಲಿದ್ದಾಗ ಶುಲ್ಕ ಪಾವತಿಸುವಂತೆ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳಿಗೆ ಒತ್ತಾಯಿಸಲಾಗುತ್ತಿದೆ. ಇದು ಸರಿಯಲ್ಲ, ಪ್ರವೇಶದ ಸಮಯದಲ್ಲಿಯೇ ಮಾಹಿತಿ ನೀಡಿದ್ದರೆ ಸರ್ಕಾರದಿಂದ ಶುಲ್ಕ ಮರುಭರಿಕೆಯಾದ ಕೂಡಲೇ ಪಾವತಿಸುತ್ತಿದ್ದರು ಎಂದರು.

ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್.ರಮೇಶ್‌ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬಿಡುಗಡೆಯಾಗುತ್ತಿರುವುದು ವಿದ್ಯಾರ್ಥಿವೇತನವಲ್ಲ. ಅದು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾಗಿರುವ ಶುಲ್ಕ ಮರುಭರಿಕೆಯ ಮೊಬಲಗು. ಆದುದರಿಂದ, ಸರ್ಕಾರದಿಂದ ಬಿಡುಗಡೆಯಾದ ಕೂಡಲೇ ವಿಶ್ವವಿದ್ಯಾಲಯಕ್ಕೆ ಪಾವತಿಸಲೇಬೇಕು. ಹಿಂದಿನ ವರ್ಷಗಳಲ್ಲಿ ಕೆಲವು ವಿದ್ಯಾರ್ಥಿಗಳು ಪಾವತಿಸದಿರುವ ಬಗ್ಗೆ ಆಡಿಟ್‌ನಲ್ಲಿ ಕೂಡ ಆಕ್ಷೇಪಣೆಯಾಗಿದೆ ಎಂದರು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಮೊದಲು ಶುಲ್ಕ ರಹಿತ ಅಥವಾ ಕಡಿಮೆ ಶುಲ್ಕ ಪಾವತಿಸಿಕೊಂಡು ಪ್ರವೇಶ ನೀಡಬೇಕು. ಸರ್ಕಾರದಿಂದ ಶುಲ್ಕ ಮರುಭರಿಕೆಯಾದ ನಂತರ ವಿದ್ಯಾರ್ಥಿಗಳು ಅದನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು. ಈ ಬಗ್ಗೆ ಪ್ರವೇಶದ ಸಮಯದಲ್ಲಿ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಬರೆಸಿಕೊಳ್ಳಬೇಕು ಎಂದರು.

ಕುಲಸಚಿವರು ಮಾತನಾಡಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪಿಜಿ ಸಿಇಟಿ ಮೂಲಕ ಸೀಟು ಹಂಚಿಕೆಯಾಗುವ ಎಂ.ಬಿ.ಎ. ಮತ್ತು ಎಂ.ಸಿ.ಎ. ಕೋರ್ಸ್‌ನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾತ್ರ ಸಕಾಲದಲ್ಲಿ ಮಾಹಿತಿ ಒದಗಿಸದ ಕಾರಣದಿಂದ ತೊಂದರೆಯಾಗಿತ್ತು. ಇನ್ನು ಮುಂದೆ ಈ ರೀತಿಯಾಗದಂತೆ ಕ್ರಮವಹಿಸಲಾಗಿದೆ ಎಂದರು.

**2025–ಸಿಂ–6.27(2): ಶ್ರೀ ಉಲ್ಲಾಸ್ ಇ.ಜಿ.:**

**<u>ಮೌಲ್ಯಮಾಪನ ಕೇಂದ್ರದ ಸಂಭಾವನೆ ನೀಡುವ ಬಗ್ಗೆ.</u>**

ಶ್ರೀ ಉಲ್ಲಾಸ್ ಇ.ಜಿ.ರವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ಕೆಲವು ಕಾಲೇಜುಗಳನ್ನು ಮೌಲ್ಯಮಾಪನ ಕೇಂದ್ರಗಳಾಗಿ ಗುರುತಿಸಿ ಜವಾಬ್ದಾರಿ ನೀಡಲಾಗಿದೆ. ಇದಕ್ಕಾಗಿ ಕಾಲೇಜುಗಳಲ್ಲಿ ಕೆಲವು ಸೌಲಭ್ಯಗಳು ಹಾಗೂ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ, ಮೌಲ್ಯಮಾಪನ ಕೇಂದ್ರದ ಸಂಭಾವನೆ ಪಾವತಿಸುತ್ತಿಲ್ಲ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಈ ಕುರಿತು ಪರಿಶೀಲಿಸುವುದಾಗಿ ತಿಳಿಸಿದರು.

**2025–ಸಿಂ–6.27(3): ಪ್ರೊ.ಆರ್.ಹಿರೇಮಣಿನಾಯ್ಕ:**

**<u>ಡಿಜಿಟಲ್ ಮೌಲ್ಯಮಾಪನದ ಬಗ್ಗೆ.</u>**

ಸದಸ್ಯರಾದ ಪ್ರೊ.ಆರ್.ಹಿರೇಮಣಿನಾಯ್ಕರವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನದ ಬಗ್ಗೆ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಮಾಹಿತಿ/ತರಬೇತಿ ನೀಡಲಾಗಿದೆ. ಆದರೆ, ಸ್ನಾತಕೋತ್ತರ ಪರೀಕ್ಷೆಗಳ ಉತ್ತರಪತ್ರಿಕೆ ಮೌಲ್ಯಮಾಪನವನ್ನು ಆಂತರಿಕ ಹಾಗೂ ಬಾಹ್ಯ ಪರೀಕ್ಷಕರು ಮಾಡಬೇಕಾಗಿದ್ದು, ಬಾಹ್ಯ ಪರೀಕ್ಷಕರಿಗೆ ಸೂಕ್ತ ತರಬೇತಿ ಇಲ್ಲದಿರುವುದರಿಂದ ಮೌಲ್ಯಮಾಪನ ಪ್ರಕ್ರಿಯೆ ವಿಳಂಬವಾಗುತ್ತಿದೆ. ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕೆ ಪ್ರತಿ ಉತ್ತರಪತ್ರಿಕೆಗೆ ರೂ.55/–ಗಳು ತಗುಲುತ್ತಿದ್ದು, ವೆಚ್ಚ ಅಧಿಕವಾಗುತ್ತಿದೆ. ಡಿಜಿಟಲ್ ಮೌಲ್ಯಮಾಪನದ ಕುರಿತಾಗಿ ಅಧ್ಯಾಪಕರ ಅಭಿಪ್ರಾಯವನ್ನು ಪಡೆಯದೇ ನೇರವಾಗಿ ಹೇರಲಾಯಿತು. ಇದರಿಂದ ಬಹಳಷ್ಟು ಸಮಸ್ಯೆಗಳಾದವು ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನದಿಂದಾಗಿ ಸಕಾಲದಲ್ಲಿ ಪರೀಕ್ಷಾ ಫಲಿತಾಂಶ ಮತ್ತು ಅಂಕಪಟ್ಟಿ ನೀಡುತ್ತಿಲ್ಲ ಎಂಬ ದೂರುಗಳಿವೆ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಮಾನ್ಯ ಕುಲಪತಿಯವರು ಮಾತನಾಡಿ, ಶೀಘ್ರ ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ ಮತ್ತು ಆರ್ಥಿಕವಾಗಿ ಉಳಿತಾಯದ ದೃಷ್ಟಿಯಿಂದ ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆ ಮಾಡಲಾಯಿತು. ಆದರೆ, ಇದು ನಿರೀಕ್ಷಿತ ಮಟ್ಟದಲ್ಲಿ ಸಫಲವಾಗಿಲ್ಲ. ಇದನ್ನು ಸಾರಾಸಗಟಾಗಿ ಅಳವಡಿಸದೇ ಪ್ರಾಯೋಗಿಕವಾಗಿ ಕೆಲವು ವಿಷಯಗಳಿಗೆ ಮಾತ್ರ ಅಳವಡಿಸಿ ಸಾದಕ-ಬಾದಕಗಳನ್ನು ನೋಡಿಕೊಂಡು ಉಳಿದ ಕೋರ್ಸ್‌ಗಳಿಗೆ ಕೂಡ ವಿಸ್ತರಿಸುವ ಬಗ್ಗೆ ಕ್ರಮ ವಹಿಸಬೇಕಾಗಿತ್ತು. ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆ ಉತ್ತಮವಾದುದೆಂದು ಸರ್ಕಾರದವರು ಮತ್ತು ನ್ಯಾಕ್‌ನವರು ತಿಳಿಸಿದ್ದಾರೆ. ಇದನ್ನು ಕೂಡ ಪರಿಗಣಿಸಬೇಕಾಗುತ್ತದೆ. ಆದುದರಿಂದ, ಈ ಬಗ್ಗೆ ಸಮಗ್ರ ಅಧ್ಯಯನ ಮಾಡಿಕೊಂಡು ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಸಮಗ್ರ ಅಧ್ಯಯನ ಮಾಡಿಕೊಂಡು ನಿರ್ಣಯಿಸಲಾಗುವುದು. ಅಲ್ಲದೆ, ಪರೀಕ್ಷಾ ಪ್ರಶ್ನೆಪತ್ರಿಕೆಗಳನ್ನು ಕೂಡ ವಿಶ್ವವಿದ್ಯಾಲಯದಲ್ಲಿಯೇ ಮುದ್ರಿಸಿ ಸರಬರಾಜು ಮಾಡುವ ಬಗ್ಗೆ ಕೂಡ ಪರಿಶೀಲಿಸಲಾಗುವುದು ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಬೇರೆ ವಿಶ್ವವಿದ್ಯಾಲಯಗಳಲ್ಲಿ ಡಿಜಿಟಲ್ ಮೌಲ್ಯಮಾಪನ ಏಕೆ ಸಫಲವಾಗಲಿಲ್ಲ ಎಂಬುದನ್ನು ಕೂಡ ಮಾಹಿತಿ ಪಡೆದುಕೊಂಡು ಪರಿಶೀಲಿಸಿ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಮಗ್ರವಾಗಿ ಚರ್ಚಿಸಲು ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗುವುದು ಎಂದರು.

2025-ಸಿಂ-6.27(3ಎ): **ಪ್ರೊ.ಆರ್.ಹಿರೇಮಣಿನಾಯ್ಕ್:**

**<u>ಪಿಹೆಚ್.ಡಿ. ಪ್ರವೇಶ ಪರೀಕ್ಷೆ ಬಗ್ಗೆ.</u>**

ಪ್ರೊ.ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ, ಈ ಹಿಂದೆ ನಡೆದ ಎಲ್ಲಾ ನಿಕಾಯಗಳ ಡೀನರ ಸಭೆಯಲ್ಲಿ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯನ್ನು ವಿಶ್ವವಿದ್ಯಾಲಯದ ಪಿಹೆಚ್.ಡಿ. ರೆಗ್ಯುಲೇಷನ್ ಪ್ರಕಾರ ಆಯಾ ಸ್ನಾತಕೋತ್ತರ ಅಧ್ಯಯನ ವಿಭಾಗದವರೇ ನಡೆಸಬೇಕು ಎಂದು ನಿರ್ಣಯವಾಗಿದ್ದು, ಅದರ ಪ್ರಕಾರ ಸುತ್ತೋಲೆಯನ್ನು ಕೂಡ ಹೊರಡಿಸಲಾಗಿತ್ತು. ನಂತರ ಕೇಂದ್ರೀಕೃತ ಪ್ರವೇಶ ಪರೀಕ್ಷೆ ಮಾಡುವಂತೆ ಆದೇಶ ಹೊರಡಿಸಲಾಗಿದೆ. ಇದೇ ವಿಷಯದ ಕುರಿತು ಮೂರ್‍ನಾಲ್ಕು ಆದೇಶಗಳು ಬಂದಿದ್ದು, ಆಗಾಗ್ಗೆ ನಿರ್ಣಯಗಳನ್ನು ಬದಲಿಸುತ್ತಿರುವುದರಿಂದ ವಿಭಾಗಗಳಿಗೆ ತೊಂದರೆಯಾಗುತ್ತಿದ್ದು ಅಭ್ಯರ್ಥಿಗಳು ಗೊಂದಲಕ್ಕೆ ಒಳಗಾಗಿದ್ದಾರೆ. ಇದು ಸರಿಯಲ್ಲ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಪಿಹೆಚ್.ಡಿ. ಪ್ರವೇಶದಲ್ಲಿ ಪಾರದರ್ಶಕತೆ ತರಬೇಕೆನ್ನುವ ಉದ್ದೇಶದಿಂದ ಕೇಂದ್ರೀಕೃತ ಪ್ರವೇಶ ಪರೀಕ್ಷೆ ಮಾಡುವಂತೆ ಈ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಕೂಡ ಚರ್ಚೆಯಾಗಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಪ್ರವೇಶಕ್ಕೆ ಕೇಂದ್ರೀಕೃತ ಪ್ರವೇಶ ಪರೀಕ್ಷೆ ವ್ಯವಸ್ಥೆ ಇದ್ದು, ನಮ್ಮಲ್ಲಿ ಕೂಡ ಮಾಡಬೇಕು. ಎನ್.ಇ.ಟಿ. ಪರೀಕ್ಷೆ ಮಾದರಿಯಲ್ಲಿ ಎಲ್ಲಾ ವಿಭಾಗಗಳಿಗೆ ಅನ್ವಯಿಸುವಂತೆ ಒಂದು ಸಾಮಾನ್ಯ ಪತ್ರಿಕೆ ಮತ್ತು ವಿಷಯವಾರು ಇನ್ನೊಂದು ಪತ್ರಿಕೆ ಇಟ್ಟುಕೊಂಡು ಪರೀಕ್ಷೆ ನಡೆಸಿ. ಪ್ರಶ್ನೆಪತ್ರಿಕೆಯನ್ನು ಆಂತರಿಕ ಮತ್ತು ಬಾಹ್ಯ ಪರೀಕ್ಷಕರು ಸಿದ್ಧಪಡಿಸಬಹುದು. ಇದರಿಂದ ನ್ಯಾಯಯುತವಾಗಿ ಪರೀಕ್ಷೆ ನಡೆಸಿ ಪ್ರತಿಭಾವಂತರಿಗೆ ಅವಕಾಶ ನೀಡಬಹುದು ಮತ್ತು ಪಕ್ಷಪಾತವಾಗುವುದನ್ನು ತಡೆಗಟ್ಟಬಹುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಕೇವಲ ಆಂತರಿಕ ಪರೀಕ್ಷಕರಿಂದ ಪಕ್ಷಪಾತವಾಗುತ್ತದೆ ಎಂದು ಎಲ್ಲವನ್ನೂ ಬಾಹ್ಯ ಪರೀಕ್ಷಕರಿಂದ ಮಾಡಿಸುವುದು ಸರಿಯಲ್ಲ. ಎಲ್ಲಾ ವಿಶ್ವವಿದ್ಯಾಲಯಗಳಿಗೂ ಅದರದೇ ಆದ ಸ್ವಾಯತ್ತತೆ ಇರುತ್ತದೆ. ಎಲ್ಲವನ್ನು ಒಂದೇ ರೀತಿಯಲ್ಲಿ ನೋಡುವುದು ಸರಿಯಲ್ಲ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಡಾ.ಜಿ.ಮಧುರವರು ಮಾತನಾಡಿ, ಪ್ರಶ್ನೆಪತ್ರಿಕೆ pattern ಎಲ್ಲಾ ವಿಭಾಗಗಳಿಗೂ ಏಕರೂಪದಲ್ಲಿರಬೇಕು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಪಿಹೆಚ್.ಡಿ. ರೆಗ್ಯುಲೇಷನ್‌ನಲ್ಲಿಯೇ ಈ ಬಗ್ಗೆ ವಿವರಿಸಿದೆ ಎಂಬ ಮಾಹಿತಿ ಒದಗಿಸಿದರು. ಶ್ರೀ ಶಿವಕುಮಾರ್‌ರವರು ಮಾತನಾಡಿ ಪ್ರಶ್ನೆಪತ್ರಿಕೆಗಳನ್ನು 2 ಸೆಟ್‌ಗಳಲ್ಲಿ ನೀಡಿದಾಗ ಇದೇ ಪತ್ರಿಕೆ ಬರುತ್ತದೆ ಎಂದು ಭಾವಿಸಲಾಗದು. ಪ್ರತಿ ಪ್ರಾಧ್ಯಾಪಕರು ಮತ್ತು ಪ್ರತಿ ಅಧ್ಯಯನ ವಿಭಾಗಕ್ಕೂ ಅವರದೇ ಆದ ಐಡೆಂಟಿಟಿ ಇರುತ್ತದೆ ಎಂದರು.

ಪ್ರೊ.ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾರ್ಗದರ್ಶಕರನ್ನು ಒಟ್ಟಾರೆಯಾಗಿ ಹಂಚಿಕೆ ಮಾಡಬಾರದು. ಅಭ್ಯರ್ಥಿಯ ಹಾಗೂ ಮಾರ್ಗದರ್ಶಕರ Specilization ಹೊಂದಾಣಿಕೆಯಾಗಬೇಕು. ಇಲ್ಲವಾದಲ್ಲಿ ಸಂಶೋಧನಾರ್ಥಿ ಮತ್ತು ಮಾರ್ಗದರ್ಶಕರಿಬ್ಬರಿಗೂ ತೊಂದರೆಯಾಗಲಿದ್ದು, ಸರಿಯಾದ ಸಂಶೋಧನೆ ಆಗುವುದಿಲ್ಲ. ಸಂಶೋಧನಾರ್ಥಿಗಳ ಆಯ್ಕೆಯಲ್ಲಿ ಮಾರ್ಗದರ್ಶಕರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಬೇಕು. ಕೆಲವು ವಿಭಾಗಗಳಲ್ಲಿ ಈ ರೀತಿ Specilization ಪರಿಗಣಿಸದೇ ಹಂಚಿಕೆ ಮಾಡುತ್ತಿರುವುದಾಗಿ ತಿಳಿದುಬಂದಿದ್ದು, ಈ ಬಗ್ಗೆ ಸುತ್ತೋಲೆ ಹೊರಡಿಸುವ ಅಗತ್ಯವಿದೆ. ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಪರೀಕ್ಷಾ ವಿಭಾಗದಲ್ಲಿ Research Wing ಮಾಡಿ, ಅದಕ್ಕೆ ಒಬ್ಬ Research Director ನೇಮಿಸಲಾಗುವುದು. ಇದರಿಂದ ಪಿಹೆಚ್.ಡಿ. ಕಾರ್ಯಗಳ ಸುಗಮ ಮತ್ತು ಶೀಘ್ರ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದರು.

**2025–ಸಿಂ–6.27(4): ಶ್ರೀ ಶಿವಕುಮಾರ್ ಎಂ.:**

**ನಾಡಗೀತೆ ಹಾಡುವ ಕುರಿತು.**

ಶ್ರೀ ಶಿವಕುಮಾರ್, ಎಂ. ರವರು ಮಾತನಾಡಿ, ವಿಶ್ವವಿದ್ಯಾಲಯವು ಕುವೆಂಪುರವರ ಹೆಸರನ್ನು ಹೊತ್ತಿದೆ. ಕರ್ನಾಟಕ ಸರ್ಕಾರವು ಕುವೆಂಪು ರಚಿಸಿದ ಗೀತೆಯನ್ನು ನಾಡಗೀತೆಯಾಗಿ ಘೋಷಿಸಿ ಬಹಳ ವರ್ಷಗಳಾಗಿವೆ. ವಿಶ್ವವಿದ್ಯಾಲಯದ ಆವರಣದಲ್ಲಿ ಬೆಳಿಗ್ಗೆ 10 ಗಂಟೆ ಅಥವಾ ಒಂದು ನಿಗದಿತ ಅವಧಿಯಲ್ಲಿ ನಾಡಗೀತೆಯನ್ನು ಸಾಮೂಹಿಕವಾಗಿ ಹಾಡಬೇಕು ಅಥವಾ ಧ್ವನಿವರ್ಧಕದಲ್ಲಿ ಪ್ರಸಾರ ಮಾಡಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣವು ವಿಭಿನ್ನವಾಗಿದ್ದು, ಅಧ್ಯಯನ ವಿಭಾಗಗಳು ವಿವಿಧ ಸ್ಥಳಗಳಲ್ಲಿವೆ. ಆದುದರಿಂದ ಸದಸ್ಯರ ಸಲಹೆ ಕುರಿತು ಪರಿಶೀಲಿಸುವುದಾಗಿ ತಿಳಿಸಿದರು.

**2025–ಸಿಂ–6.27(5): ಶ್ರೀ ಲಕ್ಷ್ಮಿಕಾಂತ ಚಿಮನೂರ್:**

**ಅಧ್ಯಾಪಕರು ಆರ್.ಎಸ್.ಎಸ್. ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಕುರಿತು.**

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪರಿಸರ ವಿಜ್ಞಾನ ವಿಷಯದ ಅಧ್ಯಾಪಕರಾದ ಡಾ.ಪರಿಸರ ನಾಗರಾಜರವರು ದಿನಾಂಕ:15-07-2025 ರಂದು ರಾಷ್ಟ್ರೋತ್ಥಾನ ಬಳಗದ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ ಎಂದು ನಮಗೆ ದೂರುಗಳು ಬಂದಿವೆ. ಅವರು ಕರ್ತವ್ಯದ ಅವಧಿಯಲ್ಲಿ ಕಾಲೇಜಿನ ಪಾಠಪ್ರವಚನಗಳನ್ನು ನಿರ್ವಹಿಸದೇ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಂಡು ಅವರನ್ನು ಸೇವೆಯಿಂದ ಅಮಾನತ್ತು ಮಾಡಿ ತನಿಖೆ ನಡೆಸಿ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸರ್ಕಾರಿ ನೌಕರರು ಧಾರ್ಮಿಕ ಸಂಘ ಸಂಸ್ಥೆಗಳಲ್ಲಿ ಗುರುತಿಸಿಕೊಳ್ಳಲು, ಅವುಗಳನ್ನು ಪ್ರಮೋಟ್ ಮಾಡಲು ಅವಕಾಶವಿಲ್ಲ. ಡಾ.ಪರಿಸರ ನಾಗರಾಜರವರು ಆರ್.ಎಸ್.ಎಸ್. ಸಿದ್ಧಾಂತವನ್ನು ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದಾರೆ ಎಂದು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಬಹಳಷ್ಟು ದೂರುಗಳಿವೆ. ವಿಶ್ವವಿದ್ಯಾಲಯದ ಅನುಮತಿ ಇಲ್ಲದೆಯೇ ಅವರು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ಸಂಘ ಸಂಸ್ಥೆಗಳಲ್ಲಿ ಅವರಿಗೆ ಆಸಕ್ತಿ ಇದ್ದಲ್ಲಿ ಅಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲಿ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಅವರನ್ನು ಸೇವೆಯಿಂದ ಅಮಾನತ್ತು ಮಾಡಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಇದು ಪ್ರಜಾಪ್ರಭುತ್ವದ ವ್ಯವಸ್ಥೆ. ಅವರು ಆರ್.ಎಸ್.ಎಸ್. ಸದಸ್ಯರಾಗುವುದನ್ನು ನಾವು ಆಕ್ಷೇಪಿಸಲಾಗದು. ಆದರೆ, ಅವರು ಪಾಠ ಪ್ರವಚನಗಳನ್ನು ನಿರ್ವಹಿಸದೇ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಯಾವುದೇ ಸರ್ಕಾರಿ ನೌಕರ ತಾನು ವ್ಯಕ್ತಿಗತವಾಗಿ ಸಂಘ ಸಂಸ್ಥೆಗಳ ಸದಸ್ಯತ್ವ ಹೊಂದಬಹುದು. ಆದರೆ, ಅಲ್ಲಿ ಅಭಿಪ್ರಾಯ ವ್ಯಕ್ತಪಡಿಸುವಾಗ ಸರ್ಕಾರದ ವಿರುದ್ಧ ಇರಬಾರದು. ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಅಧ್ಯಾಪಕರಾದ ಪ್ರೊ.ಷಣ್ಮುಗ ಅವರು ಪತ್ರಿಕೆಯೊಂದರಲ್ಲಿ ಸರ್ಕಾರದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಪತ್ರಿಕಾ ಹೇಳಿಕೆ ನೀಡಲು ವಿಶ್ವವಿದ್ಯಾಲಯದ ಅನುಮತಿ ಪಡೆದಿದ್ದಾರೆಯೇ? ಇದನ್ನು ಕೂಡ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ಡಾ.ಪರಿಸರ ನಾಗರಾಜ ಅವರ ವಿರುದ್ಧ ಎನ್.ಎಸ್.ಯು.ಐ. ನಿಂದ ದೂರು ಬಂದಿದ್ದು, ಇದಕ್ಕೆ ಅವರಿಂದ ವಿವರಣೆ ಕೇಳಲಾಗಿದೆ. ಅವರು ಉತ್ತರ ನೀಡಿದ್ದಾರೆ. ಇದನ್ನು ಮಾನ್ಯ ಕುಲಪತಿಯವರ ಗಮನಕ್ಕೆ ತರಲಾಗುವುದು ಮತ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು. ಪ್ರೊ.ಷಣ್ಮುಗ ರವರಿಂದ ಕೂಡ ವಿವರಣೆ ಪಡೆಯಲಾಗುವುದು ಎಂದರು.

**2025–ಸಿಂ–6.27(6):** **ಪ್ರೊ.ಹೆಚ್.ಎನ್.ರಮೇಶ್, ಹಣಕಾಸು ಅಧಿಕಾರಿಗಳು: ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿ ಕುರಿತು.**

ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್.ರಮೇಶ್‌ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಕಡಿಮೆಯಾಗುತ್ತಿದ್ದು, ದರ ಏರಿಕೆಯಿಂದ ವೆಚ್ಚಗಳಲ್ಲಿ ಹೆಚ್ಚಳವಾಗುತ್ತಿದೆ. ಸರ್ಕಾರದಿಂದ ವೇತನ ಮತ್ತು ಪಿಂಚಣಿ ಹೊರತುಪಡಿಸಿ ಉಳಿದ ಅನುದಾನ ಬರುತ್ತಿಲ್ಲ. ಪಿಂಚಣಿಯಲ್ಲಿ ಕೂಡ ರೂ.38.00 ಕೋಟಿಗಳ ಕೊರತೆಯಿದೆ. ಇದನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅವರು ಆಂತರಿಕ ಸಂಪನ್ಮೂಲದಿಂದಲೇ ಭರಿಸುವಂತೆ ತಿಳಿಸುತ್ತಿದ್ದಾರೆ. ಪ್ರತಿ ವರ್ಷ ನಿವೃತ್ತಿಯಾಗುತ್ತಿರುವವರ ಸಂಖ್ಯೆಯಲ್ಲಿ ಕೂಡ ಹೆಚ್ಚಳವಾಗುತ್ತಿದ್ದು, ಅವರಿಗೆ ಸಕಾಲದಲ್ಲಿ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ಅಭಿವೃದ್ಧಿ ಕಾಮಗಾರಿಯ ಸುಮಾರು ರೂ.70ಲಕ್ಷಗಳಷ್ಟು ಬಿಲ್ಲುಗಳು ಬಾಕಿ ಇದೆ. ಹಣಕಾಸಿನ ಸಮಸ್ಯೆಗಳನ್ನು ಸರಿಪಡಿಸದಿದ್ದಲ್ಲಿ ಬಹಳ ಕಷ್ಟವಾಗುತ್ತದೆ. ಎಲ್.ಟಿ.ಸಿ. ಮತ್ತು ವೈದ್ಯಕೀಯ ಮರುಭರಿಕೆ ಬಿಲ್ಲುಗಳನ್ನು ಕೂಡ ಪಾವತಿಸಲಾಗುತ್ತಿಲ್ಲ. ಇದಕ್ಕೆಲ್ಲಾ ಸರ್ಕಾರದಿಂದ ಅನುದಾನದ ಅಗತ್ಯವಿದೆ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸರ್ಕಾರದಿಂದ ಅನುದಾನ ತರಬೇಕು. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ನಿಯೋಗವು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪ್ರಸ್ತಾವನೆ ಸಲ್ಲಿಸಬಹುದು ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಈ ಬಗ್ಗೆ ಸಚಿವರಾದ ಶ್ರೀ ಮಧುಬಂಗಾರಪ್ಪ, ಶಾಸಕರುಗಳಾದ ಶ್ರೀ ಬಿ.ಕೆ. ಸಂಗಮೇಶ್ ಶ್ರೀ ಮಂಜುನಾಥ ಭಂಡಾರಿ, ಶ್ರೀ ಗೋಪಾಲಕೃಷ್ಣ ಬೇಳೂರು ಅವರೊಂದಿಗೆ ಚರ್ಚಿಸಿದ್ದೇನೆ. ಅವರು ನಿಯೋಗದೊಂದಿಗೆ ತೆರಳುವಂತೆ ತಿಳಿಸಿದ್ದಾರೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಜನಪ್ರತಿನಿಧಿಗಳನ್ನು ನಿಯೋಗದಲ್ಲಿ ಕರೆದೊಯ್ಯಬೇಕೆಂದರು.

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಇದಕ್ಕೆ ಉನ್ನತ ಶಿಕ್ಷಣ ಸಚಿವರನ್ನು ವಿಶ್ವವಿದ್ಯಾಲಯಕ್ಕೆ ಕರೆಸಬೇಕು ಅಥವಾ ನಿಯೋಗದೊಂದಿಗೆ ತೆರಳಿ ಅವರನ್ನು ಭೇಟಿ ಮಾಡಬೇಕು. ಉನ್ನತ ಶಿಕ್ಷಣ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದರು. ಮುಂದುವರೆದು ಮಾತನಾಡಿದ ಅವರು ದೂರಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸುವ ಕುರಿತಾಗಿ ಕೂಡ ಸರ್ಕಾರದ ಮಟ್ಟದಲ್ಲಿ ಚರ್ಚಿಸಬೇಕು ಎಂದರು.

ಹಣಕಾಸು ಅಧಿಕಾರಿಗಳು ಮುಂದುವರಿದು ಮಾತನಾಡಿ, ರಾಜ್ಯ ಸರ್ಕಾರಿ ನೌಕರರ ವೇತನ ಖಜಾನೆ-1ರಲ್ಲಿ ಆಗುತ್ತಿದ್ದು, ವಿಶ್ವವಿದ್ಯಾಲಯದ ನೌಕರರಿಗೆ ಖಜಾನೆ-2ರಲ್ಲಿ ವೇತನ ಆಗುತ್ತಿದೆ. ಖಜಾನೆ-1ರಲ್ಲಿಯೇ ವೇತನ ಆದರೆ ಅನುಕೂಲವಾಗುತ್ತದೆ. ಆದುದರಿಂದ ನಿಯೋಗ ತೆರಳಿದಾಗ ಇದನ್ನು ಕೂಡ ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಸ್ತಾವನೆ ಸಲ್ಲಿಸಬಹುದು ಎಂದರು. ಪ್ರೊ.ಆರ್.ಹಿರೇಮಣಿನಾಯ್ಕರವರು ಮಾತನಾಡಿ, ವೇತನವು ಹೆಚ್.ಆರ್.ಎಂ.ಎಸ್. ಮೂಲಕ ಆಗುತ್ತಿದೆ. ಅದೇ ರೀತಿ ಪಿಂಚಣಿ ಕೂಡ ಹೆಚ್.ಆರ್.ಎಂ.ಎಸ್. ಮೂಲಕ ಆದಲ್ಲಿ ಒಳ್ಳೆಯದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಸಂಗಮೇಶ್ವರರವರನ್ನು ಸಂಪರ್ಕಿಸಿ ದಿನಾಂಕ ಪಡೆಯಲಾಗುವುದು. ಅಂದು ಎಲ್ಲಾ ಸದಸ್ಯರು ಬಂದು ಸಹಕರಿಸುವಂತೆ ಕೋರಿದರು.

**2025-ಸಿಂ-6.27(7): ಶ್ರೀ ಹೆಚ್.ಜಿ.ಅರವಿಂದ್**

ಶ್ರೀ ಹೆಚ್.ಜಿ.ಅರವಿಂದ್‌ರವರು ಮಾತನಾಡಿ, ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದ ವಿದ್ಯಾರ್ಥಿಗಳು ಅಕ್ರಮ ಎಸಗಿದ ಪತ್ರಿಕೆಯನ್ನು ಹೊರತುಪಡಿಸಿ ಉಳಿದ ಪತ್ರಿಕೆಗಳ ಫಲಿತಾಂಶವನ್ನು ಪ್ರಕಟಿಸಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ರೆಗ್ಯುಲೇಷನ್ ಪ್ರಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

**2025-ಸಿಂ-6.27(8): ಶ್ರೀಮತಿ ಸಾಕಮ್ಮ ಬಿ.**

ಶ್ರೀಮತಿ ಸಾಕಮ್ಮರವರು ಮಾತನಾಡಿ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಇರುವಂತೆ ಪಿಹೆಚ್.ಡಿ. ನೋಂದಣಿ ರದ್ದಾಗಿರುವ ಸಂಶೋಧನಾರ್ಥಿಗಳಿಗೆ ಹೊಸದಾಗಿ ಮರು ಪ್ರವೇಶಕ್ಕೆ ಅವಕಾಶ ನೀಡಬೇಕು ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯವು AICTE ಅಡಿಯಲ್ಲಿದ್ದು, ನಾವು UGC ಮತ್ತು CSIR ನಿಯಮಗಳನ್ನು ಪಾಲಿಸುತ್ತೇವೆ. ಅದರ ಅನ್ವಯ ಮತ್ತು ಪಿಹೆಚ್.ಡಿ. ರೆಗ್ಯುಲೇಷನ್ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ರೊ.ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ, ಪಿಹೆಚ್.ಡಿ. ರೆಗ್ಯುಲೇಷನ್ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿದ್ದು, ಅದನ್ನು ಬದಲಿಸಲು ಅವಕಾಶವಿಲ್ಲ ಎಂದರು.

**2025-ಸಿಂ-6.27(9):** ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ 230 ಎಕರೆ ಅರಣ್ಯ ಪ್ರದೇಶದ ಗುತ್ತಿಗೆ ನವೀಕರಣ ಮಾಡಲು ಕೇಂದ್ರ ಸರ್ಕಾರದಿಂದ ಸ್ಟೇಜ್-1 ಪ್ರಸ್ತಾವನೆಯು ತೀರುವಳಿಯಾಗಿರುತ್ತದೆ. ವಿಶ್ವವಿದ್ಯಾಲಯದ ಭೂಪ್ರದೇಶಕ್ಕೆ ಬದಲಾಗಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ.

ಪರಿಹಾರಾತ್ಮಕವಾಗಿ ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯಿಂದ ಹಸ್ತಾಂತರವಾಗಿರುವ ಭೂಪ್ರದೇಶದಲ್ಲಿ ಅರಣ್ಯೀಕರಣ ಮಾಡಲು ಹಾಗೂ ನಿರ್ವಹಣೆಗಾಗಿ ಅವಶ್ಯವಿರುವ ರೂ.42,65,30,000/-ಗಳನ್ನು ವಿಶ್ವವಿದ್ಯಾಲಯವು ಅರಣ್ಯ ಇಲಾಖೆಗೆ ಪಾವತಿಸಬೇಕಾಗಿದೆ. ಇದನ್ನು ಪಾವತಿಸಿದಲ್ಲಿ ವಿಶ್ವವಿದ್ಯಾಲಯದ ಭೂಪ್ರದೇಶದ ಸಮಸ್ಯೆ ಬಗೆಹರಿಯುತ್ತದೆ. ಇದು ಬಗೆಹರಿದಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನುದಾನ ಪಡೆಯಲು ಸಹಾಯವಾಗುತ್ತದೆ ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು